# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570006

ದಿನಾಂಕ: 18.04.2026 ರಂದು ಪೂರ್ವಾಹ್ನ 10.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ವ್ಯವಸ್ಥಾಪನಾ ಮಂಡಳಿಯ 185ನೇ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ. ನವೀನ್ ಕುಮಾರ್ ಎಸ್.ಕೆ.**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ರಾಮನಾಥಂ ನಾಯಿಡು**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಅಪರ ಮುಖ್ಯ ಕಾರ್ಯದರ್ಶಿಗಳು** ರವರ ಪರವಾಗಿ<br>ಶ್ರೀ. ಎನ್. ಕುಮಾರ್, ಉಪ ಕಾರ್ಯದರ್ಶಿ<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ)<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು - 560001. |
| **ಅಪರ ಮುಖ್ಯ ಕಾರ್ಯದರ್ಶಿಗಳು** ರವರ ಪರವಾಗಿ<br>ಶ್ರೀ. ಯತೀಶ್, ಉಪ ಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560001 | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು - 570009 |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಡಾ. ಮಹೇಶ್ .ಎಸ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಸೋಸಲೆ ಗ್ರಾಮ ಮತ್ತು ಅಂಚೆ,<br>ಟಿ. ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ - 571120. |
| **ಶ್ರೀಮತಿ. ಮಾಲತಿ .ಟಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 355/1, ಮೊದಲ ಮಹಡಿ,<br>9ನೇ ಕ್ರಾಸ್, ಬಾಪೂಜಿ ಬಡಾವಣೆ,<br>ಚಂದ್ರಾ ಲೇಔಟ್, ಬೆಂಗಳೂರು - 560040. | **ಶ್ರೀಮತಿ. ಪ್ರಾಚಿ ಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. ಇ–402, ಡಾ. ವಿಷ್ಣುವರ್ಧನ್ ರೋಡ್,<br>ಬನಶಂಕರಿ, ಬೆಂಗಳೂರು - 560098. |
| **ಶ್ರೀ. ರಮೇಶ್ ಗುಬ್ಬೇವಾಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಗುಬ್ಬೇವಾಡ, ಸಿಂಧಗಿ ತಾಲ್ಲೂಕು,<br>ವಿಜಯಪುರ ಜಿಲ್ಲೆ. | **ಶ್ರೀ ಮಂಜು .ಆರ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಹಳ್ಳಿದಿಡ್ಡಿ ಗ್ರಾ., ಯೇಚಗಳ್ಳಿ ಅಂಚೆ,<br>ನಂಜನಗೂಡು ತಾಲ್ಲೂಕು,<br>ಮೈಸೂರು ಜಿಲ್ಲೆ - 571302. |

ಕುಲಪತಿಗಳು ಕುಲಸಚಿವರು

| ಅನುಪಸ್ಥಿತರು | |
|---|---|
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ. | **ಡಾ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು<br>ಗೂಂಜ್, ಕಲಬುರಗಿ - 585104 |

**ಮಾನ್ಯ ಕುಲಪತಿಗಳ ಸ್ವಾಗತದೊಂದಿಗೆ ಸಭೆಯು ಪ್ರಾರಂಭವಾಯಿತು.**

ಮಾನ್ಯ ಕುಲಪತಿಗಳು ಮಾತನಾಡಿ, 185ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ವಿಷಯಸೂಚಿ ಪ್ರಕಾರ ವಿವರಿಸಲು ಕುಲಸಚಿವರಿಗೆ ಸೂಚಿಸಿದರು.

ಕುಲಸಚಿವರು ದಿನಾಂಕ: 31.10.2026ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 184ನೇ ಸಾಮಾನ್ಯ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ ವಿಷಯ ಸಂಖ್ಯೆ: 185.01 (ಅ) ಬಗ್ಗೆ ವಿವರಿಸಿದರು.

ಡಾ. ಮಹೇಶ್ .ಎಸ್ ರವರು ಮಾತನಾಡಿ ದಿನಾಂಕ: **30.01**.2026ರಂದು ನಡೆದ 64ನೇ ವಿಶೇಷ ವ್ಯವಸ್ಥಾಪನ ಮಂಡಳಿಯಲ್ಲಿ ಕೈಗೊಂಡ ತೀರ್ಮಾನಗಳ ನಡಾವಳಿಯನ್ನು ಇಂದಿನವರೆಗೂ ಕಳುಹಿಸಿರುವುದಿಲ್ಲ. ಕಾರಣವೇನೆಂದರೆ, ಈ ಸಾಲಿನಲ್ಲಿ ಜರುಗಿದ ಘಟಿಕೋತ್ಸವ ಸಮಾರಂಭದಲ್ಲಿ ಒಟ್ಟು 08 ಗಣ್ಯ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿರುವುದು ಸರಿಯಿಲ್ಲ. ಒಂದು ವರ್ಷದ ಘಟಿಕೋತ್ಸವದಲ್ಲಿ 08 ಜನರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡುವುದಕ್ಕೆ ಈ 08 ಜನರ ಬಗ್ಗೆ ವ್ಯವಸ್ಥಾಪನ ಮಂಡಳಿ ಸದಸ್ಯರುಗಳಿಗೆ ಯಾವ ಮಾಹಿತಿಯು ಸಹ ಇರುವುದಿಲ್ಲ. ಇದಕ್ಕೆ ನಮ್ಮ ಅನುಮತಿ ಇರುವುದಿಲ್ಲವೆಂದು ತಿಳಿಸುತ್ತಾ, ಸಭೆಯಿಂದ ಹೊರ ನಡೆಯಲಾಯಿತು ಎಂದು ಸಭೆಯಲ್ಲಿ ವಿವರಿಸಿದರು.

ಶ್ರೀ. ಕೆ. ಹರೀಶ್ ಗೌಡರು ಮಾತನಾಡಿ, ಹೊರಗಿನ ಸಂಸ್ಥೆಯವರಿಗೆ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣವನ್ನು ಬಾಡಿಗೆಗೆ ಕೊಡುವುದಕ್ಕೆ ಮುಂಚಿತವಾಗಿ ಅವರುಗಳು ಯಾರು ಎಂಬ ಬಗ್ಗೆ ಮಾಹಿತಿಯನ್ನು ತಿಳಿಯದೇ ನೀಡುವುದು ಸೂಕ್ತವಲ್ಲವೆಂದು ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಂಸ್ಥೆಗೆ ಬಾಡಿಗೆ ನೀಡಬೇಕಾದರೆ ಆ ಸಂಸ್ಥೆಯ ಬಗ್ಗೆ ಪರಾಮರ್ಶಿಸಿ, ಮುಂದಿನ ಕ್ರಮ ವಹಿಸಬಹುದೆಂದು ತಿಳಿಸಿದರು. ಈ ಬಗ್ಗೆ ಶಾಸನಸಭೆಯಲ್ಲಿಯೂ ಸಹ ಚರ್ಚೆ ಆಗಿದೆ ಎಂದು ತಿಳಿಸಿದರು. ಇವುಗಳಷ್ಟೇ ಅಲ್ಲದೇ ಈ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಸಹ ಸದರಿ ಸಮಾರಂಭವನ್ನು ರದ್ದುಪಡಿಸಲಾಗಿದೆ ಎಂದು ಸರ್ಕಾರದಿಂದ ಪತ್ರ ಬರೆದು ತಿಳಿಸಿದ್ದರೂ ಸಹ ಸಮ್ಮೇಳನವು ಜರುಗಿತು ಎಂದು ತಿಳಿಸಿದರು.

ಸದರಿ ವಿಷಯದ ಬಗ್ಗೆ ಕುಲಸಚಿವರು ಮಾತನಾಡಿ, ಈ ಸಮಾರಂಭವನ್ನು ನಡೆಸಬಾರದೆಂದು ಮಾನ್ಯ ಕುಲಪತಿಗಳ ಅನುಮೋದನೆಯ ಅನುಸಾರ ಪತ್ರವನ್ನು ಸಂಬಂಧಪಟ್ಟ ಆಯೋಜಕರಿಗೆ ನೀಡಲಾಯಿತು ಎಂದು ತಿಳಿಸಿ, ಕ್ಷಮೆಯನ್ನು ಸಹ ಕೋರಿದರು.

**ವಿಶ್ವವಿದ್ಯಾನಿಲಯವು ಸಾರ್ವಜನಿಕ ಸಂಸ್ಥೆಯಾಗಿರುವುದರಿಂದ ಇಲ್ಲಿ ವಿದ್ಯಾರ್ಥಿಗಳು ಜ್ಞಾನದ ವಿಕಾಸದ ಹಿನ್ನಲೆಯಲ್ಲಿ ಇಲ್ಲಿಗೆ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾರೆ. ಇಂತಹ ಸಂಸ್ಥೆಗಳಲ್ಲಿ ಧರ್ಮ ಆಧಾರಿತ ಸಂಸ್ಥೆಗಳಿಗೆ ಸಭೆ/ಸಮಾರಂಭಗಳನ್ನು ನಡೆಸಲು ಅವಕಾಶಗಳನ್ನು ಕಲ್ಪಿಸಬಾರದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಕುಲಪತಿಗಳು** **ಕುಲಸಚಿವರು**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂಬಂಧ ವ್ಯವಸ್ಥಾಪನ ಮಂಡಳಿ ಸದಸ್ಯರುಗಳಿಗೆ ಯಾವುದೇ ಆಹ್ವಾನ ಪತ್ರಿಕೆಗಳು ಬಂದಿರುವುದಿಲ್ಲ. ಈ ರೀತಿ ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನು ನಡೆಸಿಕೊಳ್ಳುವುದು ಸೂಕ್ತವಲ್ಲವೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 185.01 (ಅ)**

**ವಿಷಯ: ದಿನಾಂಕ: 31-10-2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.**

– * –

ದಿನಾಂಕ: 31-10-2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಮುಂದೆ ವಿಷಯ ಮಂಡಿಸಿದೆ.

*****

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 31-10-2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

#####

**ವಿಷಯ ಸಂಖ್ಯೆ: 185.01 (ಆ)**

**ವಿಷಯ: ದಿನಾಂಕ: 31-10-2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ಅನುಸರಣಾ ವರದಿ.**

– * –

ದಿನಾಂಕ: 31-10-2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಅನುಸರಣಾ ವರದಿಯನ್ನು ಅನುಮೋದಿಸುವ ಸಂಬಂಧ ಮಂಡಿಸಿದೆ.

*****

184ನೇ ಸಾಮಾನ್ಯ ಸಭೆಯ ತೀರ್ಮಾನಗಳಲ್ಲಿ ಕೈಗೊಂಡ ಕ್ರಮದ ಅನುಸರಣಾ ವರದಿಯನ್ನು ವಿಷಯವಾರು ಸಭೆಗೆ ವಿವರಿಸುವುದೆಂದು ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆರವರು ಸಭೆಗೆ ತಿಳಿಸಿದರು.

ವಿಷಯ ಸಂಖ್ಯೆ: **184.01**ರ ಬಗ್ಗೆ.

ತೀರ್ಮಾನ:

1) **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕಲ್ಯಾಣ ಕರ್ನಾಟಕ ಭಾಗದ ಯಾದಿಗಿರಿಯಲ್ಲಿ ಸರ್ಕಾರದಿಂದ ಉಚಿತವಾಗಿ ನೀಡಿರುವ 2 ಎಕರೆ ಜಮೀನಿನಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಈಗಾಗಲೇ ಶ್ರೀ. ಶರಣಬಸಪ್ಪ ದರ್ಶಾನಾಪುರ್ ರವರು 7 ಕೋಟಿ ರೂಪಾಯಿಗಳನ್ನು ನೀಡಲು ಒಪ್ಪಿರುವುದರಿಂದ ಹಾಗೂ ಶ್ರೀ. ಅಜಯ್‌ಸಿಂಗ್ ರವರು ಸಹ ಕರಾಮುವಿ ಪ್ರಾದೇಶಿಕ ಕಟ್ಟಡ ಕಾಮಗಾರಿ ಪ್ರಾರಂಭವಾದಾಗ ಅವರೂ ಸಹ ದೇಣಿಗೆ ನೀಡಲು ಒಪ್ಪಿರುವುದಾಗಿ ಮಾನ್ಯ ಕುಲಪತಿಗಳು ತಿಳಿಸಿದ್ದು ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯವರು ಆಭಾಗದ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ನೀಡುವ ಅನುದಾನವನ್ನು ಬಳಸಿಕೊಂಡು ಯಾದಗಿರಿ ಪ್ರಾದೇಶಿಕ ಕೇಂದ್ರ ನಿರ್ಮಾಣ ಕಾರ್ಯ ಕೈಗೊಳ್ಳುವುದು. ಈ ಸಂಬಂಧ ಕರಾಮುವಿಯಿಂದ ಯಾವುದೇ ಆರ್ಥಿಕ ಸಂಪನ್ಮೂಲಗಳನ್ನು ಪಡೆಯದೇ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ ಕರಾಮುವಿಯ ಸುಸಜ್ಜಿತ ಪ್ರಾದೇಶಿಕ ಕೇಂದ್ರ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯು ತೀರ್ಮಾನಿಸಿತು.**

ಕುಲಪತಿಗಳು                ಕುಲಸಚಿವರು

2) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 09-06-2025 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ತೀರ್ಮಾನಗಳಲ್ಲಿ ವಿಷಯ ಸಂಖ್ಯೆ:183.10 ಮತ್ತು 183.11ರ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಮೇಲ್ಕಂಡ ತೀರ್ಮಾನದ ರೀತ್ಯಾ ಕ್ರಮವಹಿಸಲು ಇಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಉಳಿದಂತಹ ವಿಷಯಗಳ ತೀರ್ಮಾನಗಳ ಬಗ್ಗೆ ಕೈಗೊಂಡ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

#####

ಕೈಗೊಂಡ ತೀರ್ಮಾನದಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿರುತ್ತೀರಿ. ಯಾವ ರೀತಿಯಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ಹಣಕಾಸು ಮತ್ತು ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಗಳು ಕೇಳಿದರು.

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಕಲ್ಯಾಣ ಕಲ್ಯಾಣ ಕರ್ನಾಟಕ ಭಾಗದ ಯಾದಿಗಿರಿಯಲ್ಲಿ ಸರ್ಕಾರದಿಂದ ಉಚಿತವಾಗಿ ನೀಡಿರುವ 2 ಎಕರೆ ಜಮೀನಿನಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಈಗಾಗಲೇ ಶ್ರೀ. ಶರಣಬಸಪ್ಪ ದರ್ಶಾನಾಪುರ್ ರವರು 7 ಕೋಟಿ ರೂಪಾಯಿಗಳನ್ನು ನೀಡಲು ಒಪ್ಪಿರುವುದರಿಂದ ಹಾಗೂ ಶ್ರೀ. ಅಜಯ್‌ಸಿಂಗ್ ರವರು ಸಹ ಕರಾಮುವಿ ಪ್ರಾದೇಶಿಕ ಕಟ್ಟಡ ಕಾಮಗಾರಿ ಪ್ರಾರಂಭವಾದಾಗ ಅವರೂ 5 ಕೋಟಿ ದೇಣಿಗೆ ನೀಡಲು ಒಪ್ಪಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ನಮ್ಮ ವಿಶ್ವವಿದ್ಯಾನಿಲಯದಿಂದ 5 ಕೋಟಿ ರೂಪಾಯಿಗಳನ್ನು ಹಾಕಿ ನಾವು ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸಿದರೆ ಅಂತಹ ಸಂದರ್ಭಗಳಲ್ಲಿ ಮೇಲ್ಕಂಡ ಶ್ರೀ. ಶರಣಬಸಪ್ಪ ದರ್ಶಾನಾಪುರ್ ಮತ್ತು ಶ್ರೀ. ಅಜಯ್‌ಸಿಂಗ್ ರವರು ಸಹ ದೇಣಿಗೆಯನ್ನು ನೀಡುತ್ತಾರೆ ಎಂದು ತಿಳಿಸಿದರು.

ಈ ವಿಷಯಕ್ಕೆ ಸಂಬಂಧಪಟ್ಟಂತೆ, ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿಗಳು ಮಾತನಾಡಿ ಕಲ್ಯಾಣ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ ಸರ್ಕಾರದಿಂದ ಉಚಿತವಾಗಿ 2 ಎಕರೆ ಜಮೀನಿನಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಶ್ರೀ. ಶರಣಬಸಪ್ಪ ದರ್ಶಾನಾಪುರ್ ರವರು 7 ಕೋಟಿ ರೂಪಾಯಿಗಳನ್ನು ಮತ್ತು ಶ್ರೀ. ಅಜಯ್‌ಸಿಂಗ್ ರವರು ಸಹ ಕರಾಮುವಿ ಪ್ರಾದೇಶಿಕ ಕಟ್ಟಡ ಕಾಮಗಾರಿ ಪ್ರಾರಂಭವಾದಾಗ ಅವರೂ 5 ಕೋಟಿ ದೇಣಿಗೆ ನೀಡಲು ಒಪ್ಪಿರುವುದಾಗಿ ತಿಳಿಸಿರುತ್ತಾರೆಂದು ಸಭೆಯಲ್ಲಿ ವಿವರಿಸಿರುವುದು ಸರಿಯಷ್ಟೆ. ಸದರಿಯವರುಗಳು ಮೇಲ್ಕಂಡ ಮೊತ್ತವನ್ನು ನೀಡುವ ಬಗ್ಗೆ ಪತ್ರವನ್ನು ನೀಡಿರುತ್ತಾರೆಯೇ ಎಂದು ಕೇಳಿದರು. ಅವರು ಇಂತಿಷ್ಟು ಹಣ ನೀಡಲಾಗುವುದೆಂದು ಪತ್ರ ಮುಖೇನ ಮಾಹಿತಿ ಇದ್ದರೆ ಇದರಿಂದ ವಿಶ್ವವಿದ್ಯಾನಿಲಯಕ್ಕೂ ಅನುಕೂಲವಾಗುತ್ತದೆ. ಬಾಯಿಯಲ್ಲಿ ಹೇಳಿರುವುದು ಉಪಯೋಗವಾಗುವುದಿಲ್ಲ. ಅವರುಗಳಿಂದ ಪತ್ರ ಮುಖೇನ ಇಂತಿಷ್ಟು ಹಣ ನೀಡಲಾಗುವುದೆಂದು ಇರುವುದು ಒಳ್ಳೆಯದೆಂದು ಸಭೆಗೆ ತಿಳಿಸಿದರು.

ಸದರಿ ವಿಷಯಕ್ಕೆ ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿಗಳು ಸಹ ಧ್ವನಿಗೂಡಿಸಿದರು,

ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ಮಾತನಾಡಿ ಈಗಾಗಲೇ ಕಲ್ಯಾಣ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ ಸರ್ಕಾರದಿಂದ ಉಚಿತವಾಗಿ 2 ಎಕರೆ ಜಮೀನಿನಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ವಿಶ್ವವಿದ್ಯಾನಿಲಯದಿಂದ ಯಾವುದೇ ಹಣಕಾಸು ನೆರವನ್ನು ಪಡೆಯದೇ ಕೆ.ಕೆ.ಆರ್.ಡಿ.ಬಿ ಮುಖಾಂತರ ಹಣ ಪಡೆದು ಆ ಭಾಗದ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳತಕ್ಕದ್ದು ಎಂದು ತೀರ್ಮಾನಿಸಲಾಗಿದೆ ಎಂದು ಶ್ರೀ. ಡಿ. ರವಿಶಂಕರ್, ಶ್ರೀ. ಎಸ್. ಮಹೇಶ್, ಶ್ರೀಮತಿ. ಮಾಲತಿ .ಟಿ, ಶ್ರೀಮತಿ. ಪ್ರಾಚಿ ಗೌಡ, ಶ್ರೀ. ರಮೇಶ್ ಗುಬ್ಬೇವಾಡ ಮತ್ತು ಶ್ರೀ. ಆರ್. ಮಂಜು ರವರು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ಸರ್ಕಾರದಿಂದ ಉಚಿತವಾಗಿ ನೀಡಿರುವ 2 ಎಕರೆ ಜಮೀನಿನಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕು, ನಿಗಧಿತ ಸಮಯದಲ್ಲಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಸರ್ಕಾರದಿಂದ ಉಚಿತವಾಗಿ ನೀಡಿರುವ ಜನೀನನ್ನು ಸರ್ಕಾರ ವಾಪಸ್ಸು ಪಡೆಯುತ್ತದೆ. ಆದುದರಿಂದ ಕಟ್ಟಡ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು.

ಕುಲಪತಿಗಳು

ಕುಲಸಚಿವರು

ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ ಸರ್ಕಾರದಿಂದ ಉಚಿತವಾಗಿ ನೀಡಿರುವ 2 ಎಕರೆ ಜಮೀನಿನಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಕೆ.ಕೆ.ಆರ್.ಡಿ.ಬಿ ಯವರಿಂದ ಹಣ ಬರುವಿಕೆಗೆ ಹೆಚ್ಚಿನ ಶ್ರಮವಹಿಸಿ, ಕಟ್ಟಡ ನಿರ್ಮಾಣ ಕಾರ್ಯದ ಸಂಬಂಧ ಸ್ಥಳೀಯ ಸಂಸದರು/ ಶಾಸಕರುಗಳಿಂದ ದೇಣಿಗೆ ಪಡೆದು ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

2) ಕರಾಮುವಿನಿಲಯಕ್ಕೆ ಬೆಂಗಳೂರಿನಲ್ಲಿ ಲಭ್ಯವಿರುವ ನಿವೇಶನದಲ್ಲಿ ನೂತನ ಪ್ರಾದೇಶಿಕ ಕೇಂದ್ರ ಕಟ್ಟಡವನ್ನು ನಿರ್ಮಿಸುವುದರ ಸಂಬಂಧ ರೂ. 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಮಾಡುತ್ತಿದ್ದು, ಇದರಿಂದ ವಿಶ್ವವಿದ್ಯಾನಿಲಯದ ಸಂಪನ್ಮೂಲಗಳಲ್ಲಿ ಕೊರತೆ ಉಂಟಾಗುವ ಸಾಧ್ಯತೆ ಇರುತ್ತದೆ. ಆದುದರಿಂದ ವಿಶ್ವವಿದ್ಯಾನಿಲಯದ ಆರ್ಥಿಕ ಸಂಪನ್ಮೂಲಗಳಿಗೆ ಕೊರತೆ ಉಂಟಾಗದ ರೀತಿಯಲ್ಲಿ ಸ್ಥಳೀಯ ಸಂಸದರು/ ಶಾಸಕರುಗಳಿಂದ ದೇಣಿಗೆ ಪಡೆದು ಬೆಂಗಳೂರಿನಲ್ಲಿ ಲಭ್ಯವಿರುವ ನಿವೇಶನದಲ್ಲಿ ನೂತನ ಪ್ರಾದೇಶಿಕ ಕೇಂದ್ರ ಕಟ್ಟಡವನ್ನು ನಿರ್ಮಿಸುವುದರ ಸಂಬಂಧ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

*****

ವಿಷಯ ಸಂಖ್ಯೆ: 184.02

ವಿಷಯ: 66ನೇ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.

– * –

ವಿಷಯ ಸಂಖ್ಯೆ: 66.12ರ ವಿಷಯದ ಉಪಕುಲಸಚಿವರ ವಿಷಯ ಬಗ್ಗೆ ಚರ್ಚಿಸಲಾಯಿತು.

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಯಾವುದೇ ನೌಕರರುಗಳಿಗೆ ತೊಂದರೆಯಾಗದೆ ರೀತಿಯಲ್ಲಿ, ಅವರುಗಳಿಗೆ ಕಾಲ ಕಾಲಕ್ಕೆ ನೀಡಬೇಕಾಗಿರುವ ಸವಲತ್ತು ಹಾಗೂ ಬಡ್ತಿಗಳನ್ನು ನೀಡುವುದರಿಂದ ವಿಶ್ವವಿದ್ಯಾನಿಲಯದ ನೌಕರರುಗಳು ಉತ್ಸಾಹದಿಂದ ಕಾರ್ಯಗಳನ್ನು ನಿರ್ವಹಣೆ ಮಾಡುತ್ತಾರೆಂದು ತೀರ್ಮಾನಿಸಲಾಯಿತು.

2) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯ ಸಂಖ್ಯೆ: 66.12ರ ವಿಷಯಕ್ಕೆ ಈ ಮೇಲ್ಕಂಡ (1)ರ ರೀತ್ಯಾ ವ್ಯವಸ್ಥಾಪನ ಮಂಡಳಿಯು ನಿರ್ಣಯ ಕೈಗೊಳ್ಳಲಾಗಿದ್ದು, ಉಳಿದ ಶೈಕ್ಷಣಿಕ ಮಂಡಳಿ ಸಭೆಯ ವಿಷಯಗಳ ನಡಾವಳಿಯನ್ನು ಅನುಮೋದಿಸಲಾಯಿತು.

#####

ಈ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ವ್ಯವಸ್ಥಾಪನ ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಲಾಗುವುದು ಎಂದು ತಿಳಿಸಿದರು.

*****

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ: 184.03

ವಿಷಯ: 2013–14 ಮತ್ತು 2014–15ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸದಿರುವ ಬಗೆಗೆ.

– * –

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಚಿವರ ಸಮ್ಮುಖದಲ್ಲಿ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇಲ್ಲಿ ಸಭೆಯನ್ನು ಆಯೋಜಿಸಿ, ಅಲ್ಲಿಯ ತೀರ್ಮಾನಗಳ ರೀತ್ಯಾ ಮುಂದಿನ ಕ್ರಮವಹಿಸಬೇಕೆಂದು ತೀರ್ಮಾನಿಸಲಾಯಿತು.

#####

ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:

ಮೇಲ್ಕಂಡ ತೀರ್ಮಾನದ ರೀತ್ಯಾ, 2013–14 ಮತ್ತು 2014–15ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸದಿರುವ ಸಂಬಂಧ ಮಾನ್ಯ ಘನತೆವೆತ್ತ ಕುಲಾಧಿಪತಿಗಳೊಂದಿಗೆ ಚರ್ಚಿಸಿ, ಆ ಸಾಲಿನಲ್ಲಿ ಪ್ರವೇಶಾತಿ ಪಡೆದು ಕೋರ್ಸ್ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ನೀಡಲು ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ, ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸಿ, ಅಲ್ಲಿಂದ ಆ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿರುವುದು ಸಂತೋಷದ ವಿಷಯವೆಂದು ತೀರ್ಮಾನಿಸಲಾಯಿತು.

*****

ವಿಷಯ ಸಂಖ್ಯೆ: 184.04

ವಿಷಯ: ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ದರ ನಿಗಧಿಪಡಿಸಿರುವ ಬಗೆಗೆ.

– * –

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಈಗಾಗಲೇ ಮೊದಲ ಹಂತದಲ್ಲಿ ರೂ. 8.60 ಕೋಟಿ ರೂಪಾಯಿಗಳ NON-CBCSನ ಪಠ್ಯಕ್ರಮಗಳನ್ನು ಪೂರೈಸಲು ಆದೇಶ ಹೊರಡಿಸಿ ಶೇ.75 ರಷ್ಟು ಹುಂಡಿ ಪಾವತಿಸಿದ್ದು, ಇದರಲ್ಲಿ ಬಾಕಿ ಉಳಿದಿರುವ ರೂ. 7.40 ಕೋಟಿ ರೂಪಾಯಿಗಳಿಗೆ ಹೊಸದಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಕಾರ್ಯನಿರ್ವಹಣೆ ಮಾಡಲು ತೀರ್ಮಾನಿಸಲಾಯಿತು.
2) ಕರಾಮುವಿಯಲ್ಲಿ ಇಂತಹ ಕಾರ್ಯಗಳಿಗೆ ಅನುಕೂಲವಾಗುವಂತೆ ಸಮಿತಿಗಳನ್ನು ರಚಿಸಿ ಅದರಲ್ಲಿ ಇಬ್ಬರು ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನು ನೇಮಕ ಮಾಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಅನುಸರಣಾ ವರದಿಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯಲ್ಲಿ ಕೈಗೊಂಡ ತೀರ್ಮಾನದ ಕೈಗೊಂಡ ಕ್ರಮದಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿರುತ್ತೀರಿ.

ಕುಲಪತಿಗಳು

ಕುಲಸಚಿವರು

ಈ ಬಗ್ಗೆ ಪೂರ್ಣವಾದ ವಿವರಗಳೊಂದಿಗೆ ಸಭೆಯಲ್ಲಿ ಮಂಡಿಸಬೇಕೆಂದು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಕೇಳಿದರು.

ಇನ್ನು ಮುಂದೆ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಅನುಸಾರ ಯಾವ ರೀತಿಯಲ್ಲಿ ಕ್ರಮವಹಿಸಲಾಗಿದೆ ಎಂಬ ಪೂರ್ಣ ವಿವರಗಳೊಂದಿಗೆ ಮಂಡಿಸಲಾಗುವುದೆಂದು ಕುಲಸಚಿವರು ಸಭೆಗೆ ತಿಳಿಸಿದರು.

ಈ ಬಗ್ಗೆ ಪೂರ್ಣ ವಿವರಗಳನ್ನು ಆಯ-ವ್ಯಯ ವೆಚ್ಚಗಳಿಗೆ ಸಂಬಂಧಪಟ್ಟಂತೆ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಲಾದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು.

ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿಗಳು ಮಾತನಾಡಿ ಈ ಬಗ್ಗೆ ವಿಶ್ವವಿದ್ಯಾನಿಲಯದಿಂದ ನಡೆಸುವ ಕಾರ್ಯಕ್ರಮಗಳ ಬಗ್ಗೆ ಕಾಗದದ ಗುಣಮಟ್ಟವನ್ನು ಪರಿಶೀಲಿಸಲಾಗತ್ತಿದೆಯೇ? ಸರ್ಕಾರಿ ಮುದ್ರಣಾಲಯದ ಸಹಾಯಕ/ಉಪನಿರ್ದೇಶಕರನ್ನು ಉಪಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆಯೇ? ಎಂದು ಕೇಳಿದರು.

ಪುಸ್ತಕ ಮುದ್ರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮುದ್ರಣಾಲಯದ ಉಪನಿರ್ದೇಶಕರನ್ನು ಉಪಸಮಿತಿಯ ಸದಸ್ಯರನ್ನಾಗಿ ಮಾಡಲಾಗಿದೆ, ಅವರನ್ನೂ ಸಹ ಸಭೆಗೆ ಆಹ್ವಾನಿಸಿ ಅವರ ಸಲಹೆ/ಸೂಚನೆಗಳನ್ನು ಪಡೆಯಲಾಗುವುದೆಂದು ಕುಲಸಚಿವರು ಸಭೆಗೆ ತಿಳಿಸಿದರು.

*****

**ವಿಷಯ ಸಂಖ್ಯೆ: 184.05**

ವಿಷಯ: 36ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.

– * –

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 36ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆಯಾಗಿರುವ ವಿಷಯಗಳ ರೀತ್ಯಾ ಯು.ಜಿ.ಸಿ.ಯು ದಿನಾಂಕ: 12.08.2025ರ ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿರುವಂತೆ Psychology, Micro-biology, Food and Nutrition Science, Bio-technology and Clinical Nutrition and Dietetics ವಿಷಯಗಳ ಎಲ್ಲಾ ಪ್ರವೇಶಾತಿಯನ್ನು ತಡೆಹಿಡಿದು ಸುತ್ತೋಲೆ ಹೊರಡಿಸಿದ್ದು, ಯು.ಜಿ.ಸಿ. ಮತ್ತು NCHAP ರವರಿಗೆ ನೇರವಾಗಿ ಭೇಟಿ ಮಾಡಿ ಮೇಲ್ಕಂಡ ವಿಷಯಗಳ ಪ್ರವೇಶಾತಿ ಕೋರುವುದು. ಒಂದು ವೇಳೆ ಅನುಮತಿ ದೊರೆಯದಿದ್ದಲ್ಲಿ ಜುಲೈ 2025ರ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಬೇರೆ ಕೋರ್ಸುಗಳಿಗೆ ಪ್ರವೇಶಾತಿ ಬದಲಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕ ಪ್ರಕಟಣೆಯ ಮುಂದಿನ ದಿನಾಂಕದಿಂದ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಗೊಳಿಸಲು ಸಭೆಯು ತೀರ್ಮಾನಿಸಿತು.**

#####

ಅನುಸರಣಾ ವರದಿಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯ ತೀರ್ಮಾನದ ಕೈಗೊಂಡ ಕ್ರಮದಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿರುತ್ತೀರಿ. ಯಾವ ರೀತಿಯಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಮತ್ತು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಕೇಳಿದರು.

ಕುಲಪತಿಗಳು ಕುಲಸಚಿವರು

ಮಾನ್ಯ ಕುಲಪತಿಗಳು ಮಾತನಾಡಿ **Psychology, Micro-biology, Food and Nutrition Science, Bio-technology and Clinical Nutrition and Dietetics** ವಿಷಯಗಳ ಕೋರ್ಸುಗಳನ್ನು ದೂರ ಶಿಕ್ಷಣ ಮುಖಾಂತರ ನಡೆಸುವುದು ಸೂಕ್ತವಲ್ಲವೆಂದು **UGC-DEB** ಯಿಂದ ಪತ್ರ ಬಂದ ನಂತರ ಈ ಕೋರ್ಸುಗಳ ಪ್ರವೇಶಾತಿಯನ್ನು ನಿಲ್ಲಿಸಲಾಗಿದೆ ಎಂದು ತಿಳಿಸಿದರು.

*****

<u>ವಿಷಯ ಸಂಖ್ಯೆ: **184.06**</u>

ವಿಷಯ: ಶ್ರೀಮತಿ ಪದ್ಮಲತಾ W/o ಲೇಟ್. ದೊಡ್ಡರಾಜು. ಎಲ್ ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: **07.05.2025**

– * –

<u>ತೀರ್ಮಾನ:</u>

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ದೊಡ್ಡರಾಜು. ಎಲ್ ರವರು ವಿಶ್ವವಿದ್ಯಾನಿಲಯದ ಖಾಯಂ ನೌಕರರಾಗಿದ್ದು, ಸದರಿಯವರು ಅಕಾಲಿಕ ಮರಣ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ ಪದ್ಮಲತಾ ರವರಿಗೆ ಕರಾಮುವಿ ಪರಿನಿಯಮಗಳ ಅನ್ವಯ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಗೆ ಅನಗುಣವಾಗಿ ನೇಮಕಾತಿ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಅನುಸರಣಾ ವರದಿಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯ ತೀರ್ಮಾನದ ಕೈಗೊಂಡ ಕ್ರಮದಲ್ಲಿ ಕ್ರಮವಹಿಸಲಾಗಿದೆ ಎಂದು ತಿಳಿಸಿರುತ್ತೀರಿ.

ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನುಕಂಪದ ಆಧಾರದ ಮೇಲೆ ಇಂತಹ ದಿನಾಂದಿಂದ ನೇಮಕಾತಿ ಮಾಡಲಾಗಿದೆ ಎಂದು ತಿಳಿಸಿ, ಆ ಪ್ರಕಾರ ಪ್ರತಿಯನ್ನು "ಅನುಬಂಧ-ಆ" ನಲ್ಲಿ ಇದೆ ಎಂದು ತಿಳಿಸಿದರೆ ಅಷ್ಟೇ ಸಾಕಾಗುತ್ತದೆಂದು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

*****

<u>ವಿಷಯ ಸಂಖ್ಯೆ: **184.07**</u>

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಾತ್ಕಾಲಿಕ (ಗ್ರೇಡೆಡ್ ಪೇ/ ಕ್ರೋಢೀಕೃತ ವೇತನ) ನೌಕರರು ಮರಣ ಹೊಂದಿರುವ ಹಿನ್ನೆಲೆಯಲ್ಲಿ, ಅವರ ಅವಲಂಬಿತರು ತಾತ್ಕಾಲಿಕ ಉದ್ಯೋಗ ಕೋರಿ ಮನವಿ ಸಲ್ಲಿಸಿರುವ ಕುರಿತು.

– * –

<u>ತೀರ್ಮಾನ:</u>

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಯಾವುದೇ ತಾತ್ಕಾಲಿಕ ನೌಕರರುಗಳು/ತಾತ್ಕಾಲಿಕ ಗ್ರೇಡೆಡ್ ಪೇ ನೌಕರರುಗಳು ಕರ್ತವ್ಯ ನಿರ್ವಹಣಾ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದ ಒಂದು ವರ್ಷದ ಒಳಗೆ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿದ್ದಲ್ಲಿ ಮಾತ್ರ ಅಂತಹವರುಗಳ ಅವಲಂಬಿತರ ಪತ್ನಿ/ಮಕ್ಕಳುಗಳಿಗೆ ಮಾನವೀಯತೆ ಆಧಾರದ ಮೇಲೆ ಕರಾಮುವಿ ಕಾಯ್ದೆ **1992**ರ ಕಲಂ 2(9) **iii** ಪ್ರಕಾರ ತಾತ್ಕಾಲಿಕ ನೌಕರರನ್ನಾಗಿ ನೇಮಕ ಮಾಡಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು.

#####

ಕುಲಪತಿಗಳು                                                                                    ಕುಲಸಚಿವರು

ಸದರಿ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದ ಯಾವುದೇ ತಾತ್ಕಾಲಿಕ ನೌಕರರುಗಳನ್ನು ನೇಮಕ ಮಾಡಿಕೊಳ್ಳಬಾರದೆಂದು ಈಗಾಗಲೇ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಈ ಸಂಬಂಧ ಯಾವುದೇ ಇಲಾಖೆಗಳಲ್ಲಿ ತಾತ್ಕಾಲಿಕ ನೌಕರರುಗಳು ಹಾಗೂ ತಾತ್ಕಾಲಿಕ ಗ್ರೇಡೆಡ್ ಪೇ ನೌಕರರುಗಳು ಕರ್ತವ್ಯ ನಿರ್ವಹಣಾ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದ ಸಂದರ್ಭದಲ್ಲಿ ಅಂತಹವರುಗಳ ಅವಲಂಬಿತರ ಪತ್ನಿ/ಮಕ್ಕಳುಗಳಿಗೆ ಮಾನವೀಯತೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರದಲ್ಲಿ ಯಾವುದೇ ನಿಯಮಗಳಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ತಾವು ಯಾವ ಆಧಾರದ ಮೇಲೆ ತಾತ್ಕಾಲಿಕ ನೌಕರರುಗಳು ಮರಣ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ಉದ್ಯೋಗ ನೀಡಲು ಬರುವುದಿಲ್ಲವೆಂದು ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿಗಳು ತಿಳಿಸಿದರು.

**ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:**

ವಿಶ್ವವಿದ್ಯಾನಿಲಯದ ಯಾವುದೇ ತಾತ್ಕಾಲಿಕ ನೌಕರರುಗಳು/ತಾತ್ಕಾಲಿಕ ಗ್ರೇಡೆಡ್ ಪೇ ನೌಕರರುಗಳು ಕರ್ತವ್ಯ ನಿರ್ವಹಣಾ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದ ನೌಕರರ ಅವಲಂಬಿತರ ಪತ್ನಿ/ಮಕ್ಕಳುಗಳಿಗೆ ಮಾನವೀಯತೆ ಆಧಾರದ ಮೇಲೆ ಯಾವುದೇ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಳ್ಳಲು ಸರ್ಕಾರದಲ್ಲಿ ಯಾವುದೇ ನಿಯಮಾವಳಿಗಳು ಇರುವುದಿಲ್ಲ. ಖಾಯಂ ನೌಕರರ ಸರ್ಕಾರಿ ಸೇವೆಯಲ್ಲಿದ್ದು, ಅಕಾಲಿಕ ಮರಣ ಹೊಂದಿದ ಸಂದರ್ಭದಲ್ಲಿ ಅವರ ಅವಲಂಬಿತರ ಪತ್ನಿ/ಮಕ್ಕಳಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಅವಕಾಶವಿರುತ್ತದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

*****

**ವಿಷಯ ಸಂಖ್ಯೆ: 184.12**

ವಿಷಯ: ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರನ್ನು ವಿ.ವಿ. ನಿಲಯದ ಸೇವೆಯಲ್ಲಿ ತಾತ್ಕಾಲಿಕವಾಗಿ ಮುಂದುವರಿಸಿರುವ ಕುರಿತು.

– * –

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಇವರು ಸರ್ಕಾರದ ನಿಯಮಾವಳಿಗಳ ಪ್ರಕಾರ 62 ವರ್ಷ ವಿಶ್ವವಿದ್ಯಾನಿಲಯದಲ್ಲಿ ಸೇವೆ ಪೂರೈಸಿರುವುದರಿಂದ ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳನ್ವಯ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬಂದಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:**

ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ರವರು ಮಾತನಾಡಿ ಈ ಬಗ್ಗೆ 3–4 ದಿನಗಳು ಮುಂಚಿತವಾಗಿ ಅವರು ಪತ್ರವನ್ನು ನೀಡಬೇಕು. ವಿಶ್ವವಿದ್ಯಾನಿಲಯದಲ್ಲಿ ಗೆಸ್ಟ್ ಲೆಕ್ಚರ್‌ಗಳಿಗೆ ಎಷ್ಟು ವೇತನವನ್ನು ನೀಡಲಾಗುತ್ತಿದೆ, ಅಷ್ಟನ್ನು ಮಾತ್ರ ನೀಡಬೇಕು ಎಂದು ತಿಳಿಸಿದರು. ಅಷ್ಟೇ ಅಲ್ಲದೇ ಸದರಿಯವರು ಕೋರ್ಟಿನಿಂದ ಸ್ಟೇ ತಂದಿದ್ದರೆ ಅಂತಹವರುಗಳಿಗೆ ವಿಶ್ವವಿದ್ಯಾನಿಲಯದ ಮತ್ತು ಸರ್ಕಾರದ ಇಂದಿನ ನಿಯಮಗಳನ್ನು ಕೋರ್ಟಿಗೆ ವಿವರಣೆಗಳನ್ನು ನೀಡಿ, ಅವರುಗಳನ್ನು ಕೊಡಲೇ ಸೇವೆಯಿಂದ ರಿಲೀವ್ ಮಾಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

*****

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ: 184.13**

ವಿಷಯ: ವಿವಿನಿಲಯದ ಆವರಣದಲ್ಲಿರುವ ಅತಿಥಿಗೃಹದಲ್ಲಿನ **Kitchen** ಮತ್ತು **Dining Hall** ಅನ್ನು ವಿಸ್ತರಿಸಿ ನವೀಕರಿಸುವ ಹಾಗೂ ಇತರೆ ದುರಸ್ಥಿ ಕೆಲಸಗಳನ್ನು ನಿರ್ವಹಿಸುವುದರ ಬಗ್ಗೆ.

– * –

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ **Kitchen** ಮತ್ತು **Dining Hall** ಅನ್ನು ವಿಸ್ತರಿಸಿ ನವೀಕರಿಸುವ ಬದಲು ಇತರೆ ದುರಸ್ಥಿ ಕಾಮಗಾರಿಗಳನ್ನು ಮಾಡುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಸದರಿ ವಿಷಯದ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಮಾತನಾಡಿ ಈಗಾಗಲೇ ವಿವಿನಿಲಯದ ಆವರಣದಲ್ಲಿರುವ ಅತಿಥಿಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸಿ ನವೀಕರಿಸಲು ಕಾರಣವೇನೆಂದರೆ ವಿಶ್ವವಿದ್ಯಾನಿಲಯದಲ್ಲೇ ಪ್ರತಿ ವರ್ಷವೂ ಘಟಿಕೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳುವುದರಿಂದ ಮಾನ್ಯ ಘನತೆವೆತ್ತ ಕುಲಾಧಿಪತಿಗಳು ಆಗಮಿಸಿರುವುದರಿಂದ ಘಟಿಕೋತ್ಸವ ಸಮಾರಂಭ ಮುಗಿದ ನಂತರ ವಿಶ್ರಾಂತಿ ಪಡೆಯಲು ಅತಿಥಿಗೃಹಕ್ಕೆ ಬರುತ್ತಾರೆ. ಆ ಸಂದರ್ಭದಲ್ಲಿ ಅವರಿಗೆ ಅನುಕೂಲವಾಗಲೆಂದು Kitchen ಮತ್ತು Dining Hall ಅನ್ನು ವಿಸ್ತರಿಸಿ ನವೀಕರಿಸುವ ಬದಲು ಇತರೆ ದುರಸ್ಥಿ ಕಾಮಗಾರಿಗಳನ್ನು ಮಾಡಲು ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

*****

**ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:**

ಕರ್ನಾಟಕ ರಾಜ್ಯ ಮುಕ್ತ ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ **Kitchen** ಮತ್ತು **Dining Hall** ಅನ್ನು ವಿಸ್ತರಿಸಿ ನವೀಕರಿಸುವ ಹಾಗೂ ದುರಸ್ಥಿ ಕಾಮಗಾರಿಗಳನ್ನು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ಪೂರಕ ವಿಷಯಗಳ ಕಾರ್ಯಸೂಚಿ**

**ವಿಷಯ ಸಂಖ್ಯೆ: 184.22**

ವಿಷಯ: ಡಾ. ಸುಮತಿ ರಾಮಕೃಷ್ಣ ಗೌಡ ಇವರ ವಿರುದ್ಧ ಬಿ.ಸಿ.ಎ ವಿದ್ಯಾರ್ಥಿಗಳು ನೀಡಿರುವ ದೂರಿಗೆ ಸಂಬಂಧಿಸಿದಂತೆ ಪರಿಶೀಲಿಸಲು 'ವಿಚಾರಣಾ ಸಮಿತಿ'ಯನ್ನು ರಚಿಸಿರುವ ಕುರಿತು.

– * –

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಡಾ. ಸುಮತಿ ರಾಮಕೃಷ್ಣ ಗೌಡರವರನ್ನು ಈ ಕೂಡಲೇ ಅಮಾನತ್ತು ಮಾಡಬೇಕು. ಆದಾಗ್ಯೂ ವಿದ್ಯಾರ್ಥಿಗಳು ಯಾವ ಖಾತೆಗೆ ಹಣ ಹಾಕಿಸಿಕೊಂಡು ಅವುಗಳನ್ನು ಅವರಿಗೆ ನೀಡಿರುವ ತಾತ್ಕಾಲಿಕ ನೌಕರರನ್ನು ಸಹ ಕೂಡಲೇ ಕೆಲಸದಿಂದ ತೆಗೆಯಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಖಾಯಂ ನೌಕರರುಗಳಿಗೆ ವಿಶ್ವವಿದ್ಯಾನಿಲಯದಿಂದ ಪ್ರತಿ ಮಾಹೆ ಅಂತಿಮ ದಿನಾಂಕದಂದು ವೇತನ ಪಾವತಿಯಾಗುತ್ತಿದ್ದರೂ ಸಹ ಅನಾವಶ್ಯಕವಾಗಿ ವಿದ್ಯಾರ್ಥಿಗಳಿಂದ ಹಣ ಪಡೆಯುತ್ತಿರುವ ಇಂತಹ ನೌಕರರುಗಳ ಮೇಲೆ ಕಠಿಣವಾದ ಶಿಸ್ತು ಕ್ರಮ ಜರುಗಿಸಲು ವಿಚಾರಣಾ ಸಮಿತಿಯನ್ನು ರಚಿಸಲಾಗುತ್ತದೆ. ಅಂತಹ ಸಮಿತಿಗೆ ಶ್ರೀ.ಕೆ.ಹರೀಶ್ ಗೌಡರನ್ನು ಸದಸ್ಯರನ್ನಾಗಿ ನೇಮಿಸಲು ಸಭೆಯು ತೀರ್ಮಾನಿಸಿತು.

#####

ಕುಲಪತಿಗಳು

ಕುಲಸಚಿವರು

ಸದರಿ ವಿಷಯದ ಬಗ್ಗೆ ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಪೂರ್ಣ ವಿವರಗಳನ್ನು ಕೇಳಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು ಪೂರ್ಣ ವಿವರಣೆಗಳನ್ನು ನೀಡಿದರು.

ಇಂತಹ ನೌಕರರುಗಳ ಮೇಲೆ ಕಠಿಣವಾದ ಶಿಸ್ತುಕ್ರಮ ಜರುಗಿಸಲು ವಿಚಾರಣಾ ಸಮಿತಿಯನ್ನು ರಚಿಸಲಾಗುತ್ತದೆ. ಅಂತಹ ಸಮಿತಿಗೆ ಶ್ರೀ. ಕೆ. ಹರೀಶ್ ಗೌಡರನ್ನು ಸದಸ್ಯರನ್ನಾಗಿ ನೇಮಿಸಲು ಸಭೆಯು ತೀರ್ಮಾನಿಸಿದ್ದರೂ ಸಹ ಇವರು ಸದಸ್ಯರನ್ನಾಗಿ ನೇಮಿಸಿರುವುದಿಲ್ಲ. ಈಗಾಗಲೇ ವಿಚಾರಣಾ ಸಮಿತಿಯನ್ನು ರಚಿಸಿ ವರದಿಯನ್ನು ಸಹ ಸಲ್ಲಿಸಿರುತ್ತಾರೆ.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

### ಸದಸ್ಯರಾದ ಶ್ರೀ. ಹರೀಶ್ ಗೌಡರು ಮಂಡಿಸಿದ ವಿಷಯ:

1) ಸದಸ್ಯರಾದ ಶ್ರೀ. ಹರೀಶ್ ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ನೌಕರರುಗಳಾದ 17 ಪ್ರಾದೇಶಿಕ ನಿರ್ದೇಶಕರುಗಳಿಗೆ 7ನೇ ವೇತನ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ಸ್ಕೇಲ್ ನೌಕರರುಗಳಿಗೆ 7ನೇ ವೇತನ ನೀಡುವ ಬಗ್ಗೆ.

– * –

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ / ಕಾಲಿಕ ವೇತನ ಶ್ರೇಣಿಯ 17 ಪ್ರಾದೇಶಿಕ ನಿರ್ದೇಶಕರುಗಳಿಗೆ 7ನೇ ವೇತನವನ್ನು ಮಾತ್ರ ನೀಡಲು ಇಂದಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ತೀರ್ಮಾನಿಸಿದರು.

2) ಆದಾಗ್ಯೂ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಪದನಾಮಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ನೌಕರರುಗಳಿಗೆ 7ನೇ ವೇತನವನ್ನು ಮಾತ್ರ ನೀಡಲು ಇಂದಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ತೀರ್ಮಾನಿಸಿದರು.

#####

ಸದರಿ ವಿಷಯದ ಬಗ್ಗೆ ಶ್ರೀ. ಕೆ. ಹರೀಶ್ ಗೌಡರು ಮಾತನಾಡಿ ಕರಾಮುವಿಯ ಪ್ರಾದೇಶಿಕ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ತಾತ್ಕಾಲಿಕ ಗ್ರೇಡೆಡ್ ಪೇ / ಕಾಲಿಕ ವೇತನ ಶ್ರೇಣಿಯ 17 ಪ್ರಾದೇಶಿಕ ನಿರ್ದೇಶಕರುಗಳಿಗೆ 7ನೇ ವೇತನವನ್ನು ನೀಡಬೇಕೆಂದು ತಿಳಿಸಿದರು.

ಶ್ರೀ. ಲೋಕೇಶ್ ರವರು ಯಾರು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ಅವರಿಗೆ ಯಾವ ಕಾರಣಕ್ಕೆ 7ನೇ ವೇತನವನ್ನು ನೀಡುತ್ತಿಲ್ಲವೆಂದು ಶ್ರೀ. ಕೆ. ಹರೀಶ್ ಗೌಡರು ಮತ್ತು ಶ್ರೀ. ಡಿ. ರವಿಶಂಕರ್ ರವರು ಕೇಳಿದರು.

ಕುಲಪತಿಗಳು ಕುಲಸಚಿವರು

ಕುಲಸಚಿವರು ಮಾತನಾಡಿ ಗ್ರೇಡೆಡ್ ಪೇ ವೇತನದ ಆಧಾರದ ಮೇಲೆ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ 7ನೇ ವೇತನ ನೀಡುವ ಬಗ್ಗೆ ಮುಂದಿನ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮುಂದುವರೆದು ಮಾತನಾಡಿ 197 ಜನರಿಗೆ 10 ವರ್ಷ ಆಗಿರುತ್ತದೆ ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯದ ತಾತ್ಕಾಲಿಕ ನೌಕರರುಗಳನ್ನು ತಾತ್ಕಾಲಿಕ ಗ್ರೇಡೆಡ್ ಪೇ / ಕಾಲಿಕ ವೇತನ ಶ್ರೇಣಿಯ ನೌಕರರುಗಳನ್ನಾಗಿ ಮಾಡಲು ಯಾವ ಮಾನದಂಡಗಳನ್ನು ಬಳಸಲಾಗುತ್ತಿದೆ. ಯಾವ ಆದೇಶದ ಮೇಲೆ ಇವುಗಳನ್ನು ಮಾಡಲಾಗುತ್ತಿದೆ ಎಂಬ ವಿವರಗಳನ್ನು ಸರ್ಕಾರಕ್ಕೆ ಕಳುಹಿಸಲು ಹಣಕಾಸು ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

7ನೇ ವೇತನ ಶ್ರೇಣಿಯನ್ನು ಕರ್ನಾಟಕ ಸರ್ಕಾರದ / ವಿಶ್ವವಿದ್ಯಾನಿಲಯಗಳ ಖಾಯಂ ನೌಕರರುಗಳಿಗೆ ಮಾತ್ರ ನೀಡಲು ಸರ್ಕಾರದ ಆದೇಶವಾಗಿರುತ್ತದೆಂದು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

**ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ತಾತ್ಕಾಲಿಕ ನೌಕರರುಗಳಾಗಿ ಗ್ರೇಡೆಡ್ ಪೇ/ಕಾಲಿಕ ವೇತನ ಶ್ರೇಣಿಯಲ್ಲಿರುವ ನೌಕರರುಗಳಿಗೆ 7ನೇ ವೇತನ ನೀಡಬೇಕಾದರೆ, ಈ ಸಂಬಂಧ ಹಣಕಾಸು ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಗಳಿಗೆ ಪತ್ರ ಬರೆದು ಅನುಮೋದನೆ ಪಡೆದ ನಂತರ ಮುಂದಿನ ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

*****

3) ಸದಸ್ಯರಾದ ಶ್ರೀ. ಹರೀಶ್ ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಶ್ರೀ. ಶ್ರೀನಿವಾಸ .ವಿ ರವರಿಗೆ ಡಾಟಾ ಎಂಟ್ರಿ ಹುದ್ದೆಯಿಂದ ಕನ್ನಡ ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಿದ್ದರೂ ಸಹ ಇದುವರೆಗೆ ಏತಕ್ಕೆ **Pay fixation** ಮಾಡಿರುವುದಿಲ್ಲವೆಂದು ಕೇಳಿದರು.

– * –

ತೀರ್ಮಾನ:

**ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಶ್ರೀ. ಶ್ರೀನಿವಾಸ .ವಿ, ಡಾಟಾ ಎಂಟ್ರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ನಂತರದ ದಿನಗಳಲ್ಲಿ ಅವರನ್ನು ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ ನೀಡಲಾಗಿದ್ದು, ಸದರಿಯವರಿಗೆ ಕೂಡಲೇ ನಿಯಮಾನುಸಾರ Pay fixation ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ಕುಲಸಚಿವರು ಮಾತನಾಡಿ, ಶ್ರೀ. ಶ್ರೀನಿವಾಸ .ವಿ, ಡಾಟಾ ಎಂಟ್ರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅನಂತರದ ದಿನಗಳಲ್ಲಿ ಪರಿನಿಯಮಗಳನ್ನು ಸಿದ್ಧಪಡಿಸಿ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗೆ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಸದರಿ ಪರಿನಿಯಮವು ಇದುವರೆಗೂ ಕುಲಾಧಿಪತಿಗಳಿಂದ ಅನುಮೋದನೆಯಾಗಿ ಬಂದಿರುವುದಿಲ್ಲ. ಸದರಿ ಪರಿನಿಯಮವನ್ನು ಮಾನ್ಯ ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ, ಸದರಿಯವರಿಗೆ ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆಂದು ಸಭೆಗೆ ತಿಳಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ ರವರುಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ರಚಿತವಾದ ಪರಿನಿಯಮಗಳಿಗೆ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತವಾದ ನಂತರ ಅದರ ಆಧಾರದ ಮೇಲೆ ಪದೋನ್ನತಿಯನ್ನು ನೀಡಬೇಕಾಗಿರುತ್ತದೆಂದು ತಿಳಿಸಿದರು.

ಕುಲಪತಿಗಳು

ಕುಲಸಚಿವರು

ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:

ವಿಶ್ವವಿದ್ಯಾನಿಲಯದಲ್ಲಿ ರಚಿತವಾದ ಪರಿನಿಯಮಗಳಿಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ, ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡು ನಂತರ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕೆ ಸರ್ಕಾರಕ್ಕೆ ಕಳುಹಿಸಿರುವ ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡ ವಿಶ್ವವಿದ್ಯಾನಿಲಯಕ್ಕೆ ಪರಿನಿಯಮಗಳು ಬಂದ ನಂತರ, ವಿಶ್ವವಿದ್ಯಾನಿಲಯದಲ್ಲಿ ಸಿದ್ದಪಡಿಸಿರುವ C & R ಗಳನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸಿ ಅನುಮೋದನೆ ಪಡೆದ ನಂತರ ಮುಂದಿನ ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಂಡಿಸಿದ ವಿಷಯ:

6) ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಡೀನ್(ಶೈಕ್ಷಣಿಕ) ಮತ್ತು ಡೀನ್(ಅಧ್ಯಯನ ಕೇಂದ್ರ)ಗಳನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ನೀಡುವಂತೆ ಸೂಚಿಸಿದ್ದರೂ ಸಹ ಇದುವರೆಗೆ ಸಲ್ಲಿಸಿರುವುದಿಲ್ಲ. ಇದಕ್ಕೆ ಕಾರಣ ಕಾರಣವೇನು ಎಂದು ಕೇಳಿದರು.

– * –

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್(ಅಧ್ಯಯನ ಕೇಂದ್ರ) ರವರನ್ನು ನೇಮಿಸಲು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಸದಸ್ಯರುಗಳಿಗೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:

ವಿಶ್ವವಿದ್ಯಾನಿಲಯದಲ್ಲಿ ಎರಡು ಡೀನ್‌ಗಳಿದ್ದಾರೆ C & R ಪ್ರಕಾರ ಡೀನ್(ಶೈಕ್ಷಣಿಕ) ಮತ್ತು ಡೀನ್(ಅಧ್ಯಯನ ಕೇಂದ್ರ) ರವರನ್ನು ನೇಮಕ ಮಾಡಲಾಗಿದ್ದು, ಇದಕ್ಕೆ C & R ಪ್ರಕಾರ ಯಾರು ಅರ್ಹರಿದ್ದಾರೆ ಎಂಬ ವಿಷಯವನ್ನು ಮುಂದಿನ ಸಭೆಯ ಗಮನಕ್ಕೆ ತರಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

*****

7) ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾದೇಶಿಕ ನಿರ್ದೇಶಕರುಗಳಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವವರನ್ನು ಒಂದು ಪ್ರಾದೇಶಿಕ ಕೇಂದ್ರದಿಂದ ಬೇರೆ ಪ್ರಾದೇಶಿಕ ಕೇಂದ್ರಕ್ಕೆ ವರ್ಗಾವಣೆ ಮಾಡುವ ಬಗ್ಗೆ.

– * –

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪಾದೇಶಿಕ ನಿರ್ದೇಶಕರುಗಳು ಒಂದೇ ಕೇಂದ್ರದಲ್ಲಿ 2(ಎರಡು) ವರ್ಷ ಸೇವೆಯ ನಂತರ ಬೇರೆ ಬೇರೆ ಪ್ರಾದೇಶಿಕ ಕೇಂದ್ರಗಳಿಗೆ ವರ್ಗಾವಣೆ ಮಾಡಲು ಸಭೆಯು ತೀರ್ಮಾನಿಸಿತು.

#####

ಡಾ. ಮಹೇಶ್ .ಎಸ್ ರವರು ಮಾತನಾಡಿ ಪಾದೇಶಿಕ ನಿರ್ದೇಶಕರುಗಳು ಒಂದೇ ಕೇಂದ್ರದಲ್ಲಿ 2(ಎರಡು) ವರ್ಷ ಸೇವೆಯ ನಂತರ ಬೇರೆ ಬೇರೆ ಪ್ರಾದೇಶಿಕ ಕೇಂದ್ರಗಳಿಗೆ ವರ್ಗಾವಣೆ ಮಾಡುವ ಸಂಬಂಧ ಒಂದು ಉಪಸಮಿತಿಯನ್ನು ರಚಿಸಲಾಗಿತ್ತು. ಸದರಿ ಉಪಸಮಿತಿಯು 2 ಬಾರಿ ಸಭೆಯನ್ನು

ಕುಲಪತಿಗಳು ಕುಲಸಚಿವರು

ನಡೆಸಿಅದನ್ನು ಅಷ್ಟಕ್ಕೆ ಮುಕ್ತಾಯಗೊಳಿಸಲಾಯಿತು. ಅಂತಿಮವಾಗಿ ಯಾವುದೇ ತೀರ್ಮಾನಗಳಾಗಿರುವುದಿಲ್ಲ. ಈಗಾಗಲೇ 6 ರಿಂದ 8 ತಿಂಗಳುಗಳಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಆದಾಗ್ಯೂ, ಯಾರ್ಯಾರು ಒಂದೇ ಪಾದೇಶಿಕ ಕೇಂದ್ರಗಳಲ್ಲಿ ಪ್ರಾದೇಶಿಕ ನಿರ್ದೇಶಕರುಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅವರುಗಳನ್ನು ಮಾತ್ರ ಬೇರೆ ಪ್ರಾದೇಶಿಕ ಕೇಂದ್ರಗಳಿಗೆ ವರ್ಗಾವಣೆಗಳನ್ನು ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು.

ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ಪ್ರಾದೇಶಿಕ ನಿರ್ದೇಶಕರುಗಳು ಯಾರ್ಯಾರು ಎಲ್ಲಿರುತ್ತಾರೆ ಎಂಬ ಬಗ್ಗೆ ಸ್ಪಷ್ಟವಾದ ವಿವರಗಳನ್ನು ಸಭೆಯಲ್ಲಿ ವಿವರಿಸಬೇಕೆಂದು ತಿಳಿಸಿದರು.

<u>ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:</u>

ಈ ಬಗ್ಗೆ ಈಗಾಗಲೇ ಉಪಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯ ಮುಖಾಂತರ ಯಾರ್ಯಾರು ಎಷ್ಟು ವರ್ಷಗಳ ಕಾಲ ಯಾವ ಯಾವ ಪ್ರಾದೇಶಿಕ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ ಎಂಬ ವಿವರಗಳನ್ನು ಹಾಗೂ ಉಪಸಮಿತಿಯಲ್ಲಿ ಫಿಕ್ಸ್ ಮಾಡಿದ ಮಾನದಂಡಗಳ ರೀತಿ ತೀರ್ಮಾನಗಳನ್ನು ಕೈಗೊಂಡು ನಂತರದ ವರದಿಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.

#####

<u>ಸದಸ್ಯರಾದ ಶ್ರೀ. ಮಂಜು ಆರ್ ರವರು ಮಂಡಿಸಿದ ವಿಷಯ:</u>

9) ಸದಸ್ಯರಾದ ಶ್ರೀ. ಮಂಜು .ಆರ್ ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೆಂಗಳೂರು ಪ್ರಾದೇಶಿಕ ನಿರ್ದೇಶಕರಾದ ಡಾ. ಎಂ. ಸುಧಾಕರ ರವರು ಪತ್ರಿಕಾ ಗೋಷ್ಠಿಯಲ್ಲಿ "ಆಡಳಿತ ಪಕ್ಷ"ದ ವಿರುದ್ಧವಾಗಿ ಮಾತನಾಡಿರುವುದರಿಂದ ಇವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

– * –

<u>ತೀರ್ಮಾನ:</u>

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ತಾತ್ಕಾಲಿಕ ಕಾಲಿಕ ವೇತನ ಶ್ರೇಣಿ ಪ್ರಾದೇಶಿಕ ನಿರ್ದೇಶಕರಾದ ಡಾ. ಎಂ. ಸುಧಾಕರ ರವರಿಗೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು, ಪತ್ರಿಕಾ ಗೋಷ್ಠಿಗಳಲ್ಲಿ ಆಡಳಿತ ಪಕ್ಷದ ವಿರುದ್ಧವಾಗಿ ಮಾತನಾಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಧಕ್ಕೆ ಉಂಟಾಗುವುದರಿಂದ ಸದರಿ ನೌಕರರಿಗೆ ಎಚ್ಚರಿಕೆ ನೋಟೀಸ್ ನೀಡಿ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

<u>ದಿನಾಂಕ: 18.04.2026ರ ಸಭೆಯಲ್ಲಿ ಕೈಗೊಂಡ ತೀರ್ಮಾನ:</u>

ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸರ್ಕಾರಿ ಖಾಯಂ ನೌಕರರು ಮತ್ತು ತಾತ್ಕಾಲಿಕ ನೌಕರರು ಸರ್ಕಾರದ ನಿಯಮಗಳ ರೀತ್ಯಾ ನಡೆದುಕೊಳ್ಳುವುದು ಹಾಗೂ ಸದರಿ ನಿಯಮಗಳನ್ನು ಪಾಲನೆ ಮಾಡಬೇಕು ಇಂತಹವರುಗಳಿಗೆ 2-3 ಬಾರಿ ನೋಟೀಸ್ ನೀಡಿ/ನೋಟೀಸ್ ನೀಡಿದ್ದರೂ ಸಹ ಅಂತಹವರುಗಳು ಹಾಗೆಯೇ ನಡೆದುಕೊಳ್ಳುತ್ತಿದ್ದರೆ ಅಂತಹ ತಾತ್ಕಾಲಿಕ ನೌಕರರು, ಗ್ರೇಡೆಡ್ ಪೇ ನೌಕರರು ಮತ್ತು ಕಾಲಿಕ ವೇತನ ಶ್ರೇಣಿ ನೌಕರರುಗಳನ್ನು ಇಂದಿನಿಂದಲೇ ಕರ್ತವ್ಯದಿಂದ ವಜಾಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

*****

ಕುಲಪತಿಗಳು

ಕುಲಸಚಿವರು

ಮಾನ್ಯ ಕುಲಪತಿಗಳು ಮಂಡಿಸಿದ ವಿಷಯ:

10) **National Council for Vocational Education and Training (NCVET) Ministry of Skill Development and Enterpreneurship Director send a letter regarding considering grant of a provisional recognition status as Awarding Body Dual Category (AB-Dual) to Karnataka State Open University by NCVET Reg.**

– * –

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಏಳಿಗೆಗಾಗಿ ಮಾನ್ಯ ಕುಲಪತಿಗಳು ಶ್ರಮಿಸುತ್ತಿರುವುದು ಪ್ರಸಂಶನೀಯ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಒಳ್ಳೆಯ ಹೆಸರು ಬರುತ್ತಿದೆ ಎಂದು ತಿಳಿಸಿದರು.

#####

ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳಿಗೆ ನಡೆಸುವ **Skill Development** ಕಾರ್ಯಕ್ರಮಗಳಿಗೆ ಯಾವುದೇ ದಕ್ಕೆ ಬಾರದ ರೀತಿಯಲ್ಲಿ ನಡೆಸಬೇಕೆಂದು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

*****

11) **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಕೆಲವು ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿ ಅನುಮೋದನೆ ಪಡೆದ ನಂತರ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುವ ಬಗ್ಗೆ.**

– * –

ಮಾನ್ಯ ಕುಲಪತಿಗಳು ಮಾತನಾಡಿ ಕರಾಮುವಿಯಿಂದ ಹೊಸದಾಗಿ ರಚಿಸಲಾಗಿರುವ ಪರಿನಿಯಮಗಳನ್ನು ಮಾನ್ಯ. ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುವ ಕೆಲವು ಪರಿನಿಯಮಗಳನ್ನು ಕೆಲವು ಸ್ಪಷ್ಟೀಕರಣದೊಂದಿಗೆ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪರಿಷ್ಕೃತ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸಲ್ಲಿಸುವಂತೆ ಪತ್ರದಲ್ಲಿ ತಿಳಿಸಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರಾಮುವಿಯಿಂದ ಸೃಜಿಸಲಾಗಿರುವ ಪರಿನಿಯಮಗಳನ್ನು ಮಾನ್ಯ. ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುವ ಕೆಲವು ಪರಿನಿಯಮಗಳನ್ನು ಕೆಲವು ಸ್ಪಷ್ಟೀಕರಣದೊಂದಿಗೆ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪರಿಷ್ಕೃತ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪುನರ್ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಡಾ. ಮಹೇಶ್.ಎಸ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಿಂದ ಪರಿನಿಯಮಗಳನ್ನು ರಚಿಸಿ ಸರ್ಕಾರದ ಅನುಮೋದನೆ ಪಡೆದ ನಂತರ ಮುಂದಿನ ಕ್ರಮವಹಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆ ಹಾಗೂ ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿಗಳು ಮಾತನಾಡಿ ವಿಶ್ವವಿದ್ಯಾನಿಲಯದಿಂದ ರಚಿತಗೊಂಡ ಪರಿನಿಯಮಗಳನ್ನು ಸರ್ಕಾರಕ್ಕೆ ಕಳುಹಿಸಿದ್ದು, ಸದರಿ ಪರಿನಿಯಮಗಳು ಕುಲಾಧಿಪತಿಗಳ ಅಂಕಿತವಾದ ನಂತರವೇ ಪದೋನ್ನತಿಗಳನ್ನು ನೀಡಬೇಕಾಗಿರುತ್ತದೆ. ಅದನ್ನು ಹೊರತುಪಡಿಸಿ ಈಗಾಗಲೇ ಸರ್ಕಾರಕ್ಕೆ ಕಳುಹಿಸಿರುವ ಪರಿನಿಯಮಗಳ ಅಂಕಿತವನ್ನು ಕಾಯ್ದಿರಿಸಿ ನೀಡಿರತಕ್ಕ ಪದೋನ್ನತಿ/ಕೆಸಿಎಸ್‌ಆರ್ 32 ನಿಯಮಾವಳಿಗಳ ಪ್ರಕಾರ ನೀಡಿರತಕ್ಕ ಪದೋನ್ನತಿಗಳನ್ನು ಹಿಂಪಡೆಯಬೇಕೆಂದು ಸಭೆಯಲ್ಲಿ ತಿಳಿಸಿದರು.

*****

ಕುಲಪತಿಗಳು　　　　　　　　　　　　ಕುಲಸಚಿವರು

ತೀರ್ಮಾನ:

(1) ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರಾಮುವಿಯಿಂದ ಸೃಜಿಸಲಾಗಿರುವ ಪರಿನಿಯಮಗಳನ್ನು ಮಾನ್ಯ. ಘನತೆವೆತ್ತ ಕುಲಾಧಿಪತಿಗಳ ಅಂಕಿತವಾಗಿ ಬಂದ ನಂತರ ವಿಶ್ವವಿದ್ಯಾನಿಲಯದ ನೌಕರರುಗಳಿಗೆ ಪದೋನ್ನತಿಗಳನ್ನು ನೀಡಬೇಕು. ಅಂಕಿತವನ್ನು ಕಾಯ್ದಿರಿಸಿ ಯಾವುದೇ ಪದೋನ್ನತಿಗಳನ್ನು ನೀಡಬಾರದು, ಈಗಾಗಲೇ ಈ ರೀತಿ ನೀಡಿರತಕ್ಕ ಪದೋನ್ನತಿ/ಕೆಸಿಎಸ್‌ಆರ್ 32 ನಿಯಮಾವಳಿಗಳ ಪ್ರಕಾರ ನೀಡಿರತಕ್ಕ ಪದೋನ್ನತಿಗಳನ್ನು ಹಿಂಪಡೆಯಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

(2) ದಿನಾಂಕ: 31-10-2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಅನುಸರಣಾ ವರದಿಯಲ್ಲಿ ಮೇಲ್ಕಂಡ ಕೆಲವು ವಿಷಯಗಳಲ್ಲಿ ಬದಲಾವಣೆಗಳಾಗಿದ್ದು, ಅದರಂತೆ ಅಳವಡಿಸಿಕೊಳ್ಳುವುದು ಮತ್ತು ಉಳಿದಂತಹ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

#####

**ವಿಷಯ ಸಂಖ್ಯೆ: 185.02**

**ವಿಷಯ: 2025-26ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಅನುಮೋದನೆ ಪಡೆಯುವ ಕುರಿತು.**

- * -

2025-26ನೇ ಶೈಕ್ಷಣಿಕ ಸಾಲಿನಲ್ಲಿನ ಪ್ರಥಮ ಆವೃತ್ತಿಯಾದ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿಯನ್ನು ಸ್ನಾತಕ ಪದವಿ ಮಟ್ಟದಲ್ಲಿನ 9 ಕಾರ್ಯಕ್ರಮಗಳು, ಸ್ನಾತಕೋತ್ತರ ಪದವಿಯ 31 ಕಾರ್ಯಕ್ರಮಗಳು, 13 ಪಿಜಿ ಸರ್ಟಿಫಿಕೇಟ್, 9 ಡಿಪ್ಲೊಮಾ, 4 ಯುಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು ಸೇರಿದಂತೆ ಒಟ್ಟಾರೆ 66 ಕಾರ್ಯಕ್ರಮಗಳಿಗೆ ಪ್ರವೇಶಾತಿಯನ್ನು ದಿನಾಂಕ: 25.06.2025 ರಂದು ಪ್ರಕಟಣೆ ಹೊರಡಿಸುವ ಮೂಲಕ ಕೇಂದ್ರ ಕಚೇರಿ ಮೈಸೂರು ಹಾಗೂ 36 ಪ್ರಾದೇಶಿಕ ಕೇಂದ್ರಗಳಲ್ಲಿ ದಿನಾಂಕ:01.07.2025ರಿಂದ ಪ್ರವೇಶಾತಿ ಪ್ರಾರಂಭಿಸಲಾಯಿತು.

ಯುಜಿಸಿಯು ಈ ಜನವರಿ ಆವೃತ್ತಿಯ ಪ್ರವೇಶಾತಿಗೆ ದಿನಾಂಕ:15.10.2025 ಅನ್ನು ಅಂತಿಮ ದಿನಾಂಕವೆಂದು ಘೋಷಣೆ ಮಾಡಿದಂತೆ ಪ್ರವೇಶಾತಿಯನ್ನು ದಿನಾಂಕ: 15.10.2025ಕ್ಕೆ ಅಂತಿಮಗೊಳಿಸಲಾಗಿ, ನೇರ ಪ್ರವೇಶಾತಿಯೂ ಒಳಗೊಂಡಂತೆ **ಒಟ್ಟಾರೆ 32137 ವಿದ್ಯಾರ್ಥಿಗಳು** ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದಿದ್ದು, ವಿದ್ಯಾರ್ಥಿಗಳ ಡೇಟಾವನ್ನು ಯುಜಿಸಿಯ ಡೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಮೂಲಕ 2025-26ರ ಜುಲೈ ಆವೃತ್ತಿಯ ಪ್ರವೇಶಾತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

**ಇತ್ತೀಚಿನ ಶೈಕ್ಷಣಿಕ ಸಾಲುಗಳ ವಿವಿಧ ಆವೃತ್ತಿಗಳಲ್ಲಿನ ಹೊಸ ಪ್ರವೇಶಾತಿಯ ಸಂಖ್ಯೆಯನ್ನು ಅವಲೋಕಿಸಿದಾಗ ಈ ಆವೃತ್ತಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ.**

ಈ ಆವೃತ್ತಿಯಲ್ಲಿ ಸರ್ಕಾರದ ಅಲ್ಪಸಂಖ್ಯಾತರ ಇಲಾಖೆಯ ಪ್ರಾಯೋಜಿಕತ್ವದಲ್ಲಿ ಅಲ್ಪ ಸಂಖ್ಯಾತರ ವರ್ಗದ ವಿದ್ಯಾರ್ಥಿಗಳ ಪರವಾಗಿ ಶುಲ್ಕ ಭರಿಸುವ ಯೋಜನೆಯಡಿ ಪ್ರವೇಶಾತಿಗೊಂಡ 5328 ವಿದ್ಯಾರ್ಥಿಗಳೂ ಸೇರಿರುತ್ತಾರೆ. ಈ ವಿದ್ಯಾರ್ಥಿಗಳ ಪರವಾಗಿ ವಿಶ್ವವಿದ್ಯಾನಿಲಯಕ್ಕೆ ರೂ:13,06,45,430/-ಕೋಟಿ ರೂ ಗಳ ಒಟ್ಟಾರೆ ಶುಲ್ಕ (ಪ್ರವೇಶ + ಪರೀಕ್ಷಾ ಶುಲ್ಕ) ದಲ್ಲಿ ನಿರ್ಣಯದಂತೆ ಶೇಕಡ 12ರಷ್ಟು ರಿಯಾಯಿತಿ (ರೂ:1,56,77,452/-) ನೀಡಲಾಗಿ, ರಿಯಾಯಿತಿ ನಂತರದ ಒಟ್ಟಾರೆ ಮೊತ್ತ ರೂ:11,49.67,998/- (ಹನ್ನೊಂದು ಕೋಟಿ ನಲವತ್ತೊಂಬತ್ತು ಲಕ್ಷದ ಅರವತ್ತೇಳು ಸಾವಿರದ ಒಂಭೈನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ) ಗಳ ಶುಲ್ಕವು ವಿವಿಧ ದಿನಾಂಕಗಳಲ್ಲಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಆಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರವೇಶಾತಿ ಪ್ರಕ್ರಿಯೆಯನ್ನು ಸಂಪೂರ್ಣ ಆನ್‌ಲೈನ್‌ಗೊಳಿಸಲಾಗಿದ್ದು, ವಿವಿ ನಿಲಯದ ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ನೀಡುವ ಶೈಕ್ಷಣಿಕ ಸೇವೆಗಳು, ಇರುವ ರಿಯಾಯಿತಿಗಳ ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಆಸಕ್ತ ಸಾರ್ವಜನಿಕರಿಗೆ ತಿಳಿಸುವ ನಿಟ್ಟಿನಲ್ಲಿ

ಕುಲಪತಿಗಳು ಕುಲಸಚಿವರು

ಮಾನ್ಯ ಕುಲಪತಿಗಳು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಡೆಸಿದ ಸರಣಿ ಪತ್ರಿಕಾಗೋಷ್ಠಿಗಳ ಜೊತೆಗೆ ಮಾನ್ಯ ಕುಲಪತಿಗಳ ನಿರ್ದೇಶನದಂತೆ ಮುದ್ರಣ ಹಾಗೂ ದೃಷ್ಯ ಮಾಧ್ಯಮದಲ್ಲಿ ದೈನಂದಿನ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳ ಮೂಲಕ ಕಪ್ಪು ಬಿಳುಪುನಲ್ಲಿ ರಾಜ್ಯ / ಸ್ಥಳೀಯ ಆವೃತ್ತಿಗಳಲ್ಲಿ ಜಾಹೀರಾತು, ವಿವಿಧ ಕನ್ನಡ ನ್ಯೂಸ್ ಚಾನಲ್‌ಗಳಲ್ಲಿ ಬ್ಯಾನರ್ ವಿತ್ ವಾಯ್ಸ್ ಓವರ್ ಮೂಲಕ ಸರ್ಕಾರವು ನಿಗದಿಪಡಿಸಿರುವ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಸಂಸ್ಥೆಯ ಮೂಲಕ ಜಾಹೀರಾತನ್ನು ಪ್ರವೇಶಾತಿ ನಡೆದ ಅವಧಿಯಲ್ಲಿನ ವಿವಿಧ ದಿನಾಂಕಗಳಲ್ಲಿ ಕಾಲಕಾಲಕ್ಕೆ ಜಾಹೀರಾತು ನೀಡಲಾಗಿರುತ್ತದೆ. 104.8/98.3 ಎಫ್‌ಎಂ ರೇಡಿಯೋನಲ್ಲಿ ವಿವಿಧ ಥೀಮ್‌ಗಳ ಮೂಲಕ ಜಾಹೀರಾತು ನೀಡಲಾಗಿರುತ್ತದೆ. ಈ ಸಂಬಂಧ ಒಟ್ಟಾರೆ **ರೂ:59,24,898/-** (ಐವತ್ತೊಂಬತ್ತು ಲಕ್ಷದ ಇಪ್ಪತ್ತ ನಾಲ್ಕು ಸಾವಿರದ ಎಂಟು ನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ) ಗಳನ್ನು ಜಾಹೀರಾತು ವೆಚ್ಚವಾಗಿ ಭರಿಸಲಾಗಿರುತ್ತದೆ.

ಈ ಮೇಲಿನ ಮಾಹಿತಿಯೊಂದಿಗೆ 2025-26ನೇ ಸಾಲಿನ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿ ಸಂಬಂಧದಲ್ಲಿ ವಿವಿನಿಲಯದ ಶೈಕ್ಷಣಿಕ ಕಾರ್ಯಕ್ರಮಗಳು/ಪ್ರವೇಶಾತಿಗೆ ಅನುಸರಿಸಬೇಕಾದ ಕ್ರಮಗಳು / ನೀಡುವ ಸೇವೆಗಳು / ರಿಯಾಯಿತಿಗಳ ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಆಸಕ್ತ ಸಾರ್ವಜನಿಕರಿಗೆ ತಿಳಿಸುವ ನಿಟ್ಟಿನಲ್ಲಿ ಸರ್ಕಾರದ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜನ್ಸಿಯ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆ ನೀಡಲಾದ ಜಾಹೀರಾತುಗಳ ಸಂಬಂಧದಲ್ಲಿ ವ್ಯಯಿಸಲ್ಪಟ್ಟ ರೂ:59,24,898/-ಗಳ ಜಾಹೀರಾತು ವೆಚ್ಚಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

ಈ ರೀತಿಯ ಜಾಹೀರಾತು ಶುಲ್ಕಗಳನ್ನು ಪಾವತಿಸುತ್ತಿರು ಬಗ್ಗೆ ಕೊನೆಯ ಸಾಲಿನ ಆಡಿಟ್ ವರದಿಯಲ್ಲಿ ಯಾವುದಾದರೋ ಆಕ್ಷೇಪಣೆಗಳು ಬಂದಿದೆಯೇ ಎಂಬುದನ್ನು ಪರಿಶೀಲಿಸಿ, ಸರ್ಕಾರದ ನಿಯಮಾವಳಿಗಳ ಪ್ರಕಾರ ವಿಶ್ವವಿದ್ಯಾನಿಲಯದ ಪ್ರವೇಶಾತಿ ಜಾಹೀರಾತುಗಳನ್ನು ನೀಡಿ ಹಿಂದಿನ ಆಡಿಟ್‌ನಲ್ಲಿ ಯಾವುದಾದರೋ ಆಕ್ಷೇಪಣೆಗಳು ಬಾರದಿದ್ದಲ್ಲಿ ಅದೇ ರೀತಿ ಮುಂದುವರಿಸಬಹುದೆಂದು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2025-26ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಸರ್ಕಾರದ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜನ್ಸಿಯ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆ ನೀಡಲಾದ ಜಾಹೀರಾತುಗಳ ಸಂಬಂಧದಲ್ಲಿ ವ್ಯಯಿಸಲ್ಪಟ್ಟ ರೂ:59,24,898/-ಗಳಿಗೆ ಸಭೆಯು ಅನುಮೋದನೆ ನೀಡಿತು.**

#####

**ವಿಷಯ ಸಂಖ್ಯೆ: 185.02**

**ವಿಷಯ: 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಕುರಿತು:**

******

ಯುಜಿಸಿ-ಡೆಬ್ ಅನುಮೋದಿತ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಶೈಕ್ಷಣಿಕ ಕಾರ್ಯಕ್ರಮಗಳು (ಯುಜಿ 8+ಪಿಜಿ37 (ಎಂ.ಎ-14,ಎಂ.ಎಸ್ಸಿ-18,ಎಂ.ಕಾಂ.,ಎಂಬಿ.ಎ.,ಎಂ.ಸಿ.ಎ,ಎಂ.ಎಸ್.ಡಬ್ಲ್ಯೂ ಮತ್ತು ಎಂ.ಲಿಬ್.ಐ.ಎಸ್ಸಿ) ಹಾಗೂ ಪಿಜಿ ಸರ್ಟಿಫಿಕೇಟ್ (14) (ಇದರಲ್ಲಿ ಈ ಆವೃತ್ತಿಯಿಂದ ಭಾಷಾ ವಿಜ್ಞಾನ (Linguistics), ವಿಷಯದಲ್ಲಿನ ಸರ್ಟಿಫಿಕೇಟ್ ಕಾರ್ಯಕ್ರಮವನ್ನೂ ಒಳಗೊಂಡಂತೆ), ಯುಜಿ ಡಿಪ್ಲೋಮಾ (10)/ಸರ್ಟಿಫಿಕೇಟ್ ಕಾರ್ಯಕ್ರಮ (05)ಗಳಿಗೆ 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿಯನ್ನು ದಿನಾಂಕ:27.06.2025 ರಂದು ಪ್ರವೇಶಾತಿ ಅಧಿಸೂಚನೆ ಹೊರಡಿಸಿ, ದಿನಾಂಕ:01.07.2025ರಿಂದ ಕೇಂದ್ರ ಕಚೇರಿ ಮೈಸೂರು ಹಾಗೂ 38 ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾರಂಭಿಸಲಾಗಿದ್ದಿತು. ವಿವಿ ನಿಲಯವು ನಡೆಸುವ ಕೋರ್ಸುಗಳ ಬಗ್ಗೆ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಗಮನಕ್ಕೆ ತರುವ ನಿಟ್ಟಿನಲ್ಲಿ ಕಾಲಕಾಲಕ್ಕೆ ಕನ್ನಡ

ಕುಲಪತಿಗಳು                                                    ಕುಲಸಚಿವರು

ಹಾಗೂ ಆಂಗ್ಲ ಮಾಧ್ಯಮದಲ್ಲಿ ವಿವಿಧ ದಿನಪತ್ರಿಕೆಗಳಲ್ಲಿ ರಾಜ್ಯ/ಸ್ಥಳೀಯ ಆವೃತ್ತಿಯಲ್ಲಿ ಸರ್ಕಾರದ ಡಿ.ಐ.ಪಿ ದರದಲ್ಲಿ ಪ್ರಕಟಣೆ ನೀಡುವ ಮೂಲಕ ಕ್ರಮವಹಿಸಲಾಗಿರುತ್ತದೆ.

1. **ಜ್ಯೋತಿಷ್ಯ ಶಾಸ್ತ್ರದಲ್ಲಿ ಹೊಸದಾಗಿ ಯುಜಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ಪ್ರಾರಂಭಿಸಿರುವ ಕುರಿತು:**

ಡೀನ್(ಶೈಕ್ಷಣಿಕ)ರವರ ಟಿಪ್ಪಣಿ ಸಂಖ್ಯೆ: 08/90978/25-26, ದಿನಾಂಕ: 05.07.2025ರನ್ವಯ ಇದೇ ಶೈಕ್ಷಣಿಕ ಆವೃತ್ತಿಯಲ್ಲಿ ಜ್ಯೋತಿರ್ ವಿಜ್ಞಾನ ವಿಷಯದಲ್ಲಿ 1. ಪಲ ಜ್ಯೋತಿಷ್ಯ, 2. ಮೇಧಿನಿ ಜ್ಯೋತಿಷ್ಯ, 3. ವಾಸ್ತು ಜ್ಯೋತಿಷ್ಯ ಮತ್ತು 4. ಜ್ಯೋತಿರ್ ವಿಜ್ಞಾನ ವಿಷಯದಲ್ಲಿ 10+2 ಆಧಾರಿತ ಯುಜಿ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳನ್ನು ಹೊಸದಾಗಿ ಪರಿಚಯಿಸಿ, ಈ ಕೋರ್ಸುಗಳಿಗೂ ದಿನಾಂಕ:25.07.2025ರಂದು ಮರು ಪ್ರವೇಶಾತಿ ಅಧಿಸೂಚನೆ ಹೊರಡಿಸುವ ಮೂಲಕ ಪ್ರವೇಶಾತಿ ಪ್ರಾರಂಭಿಸಲಾಯಿತು.

2. **ಅಲ್ಪ ಸಂಖ್ಯಾತರ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿ ಕುರಿತಂತೆ:**

ಸನ್ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ 2025-26ರ ಭಾಷಣ ಕಂಡಿಕೆ-220ರಲ್ಲಿ **"ಪದವಿ ಶಿಕ್ಷಣದಿಂದ ವಂಚಿತರಾಗುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರು ಹಜ್ ಭವನದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (KSOU) ಪ್ರಾದೇಶಿಕ ಕೇಂದ್ರ ತೆರೆದು, ವಿವಿಧ ಪದವಿ/ ಸ್ನಾತಕೋತ್ತರ ಪದವಿ ಶಿಕ್ಷಣ ನೀಡಲಾಗುವುದು"** ಎಂದು ಘೋಷಿಸಿ ದಿನಾಂಕ:27.05.2025ರ ಸರ್ಕಾರಿ ಆದೇಶದ ಮೂಲಕ ರೂ.5.05 ಕೋಟಿಗಳ ಅನುದಾನವನ್ನು ನೀಡಿ ಆದೇಶಿಸಲಾದ ಹಿನ್ನೆಲೆಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಬೆಂಗಳೂರಿನ ಹಜ್ ಭವನದಲ್ಲಿ ವಿವಿ ನಿಲಯದ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಿ, ವಿಶ್ವವಿದ್ಯಾನಿಲಯ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ನಡುವೆ ದಿನಾಂಕ: 09.07.2025ರಂದು ಆದ ಪರಸ್ಪರ ಒಡಂಬಡಿಕೆಯನ್ವಯ ಅ.ಸಂ.ಇಲಾಖೆಯು ಶುಲ್ಕ (ಪ್ರವೇಶ ಶುಲ್ಕ + ಪರೀಕ್ಷಾ ಶುಲ್ಕ) ಭರಿಸುವ ಆಧಾರದ ಮೇಲೆ 2025-26ರ ಜುಲೈ ಆವೃತ್ತಿಯ ಪ್ರವೇಶಾತಿಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿ/ಡಿಪ್ಲೋಮಾ/ ಸರ್ಟಿಫಿಕೇಟ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿ ಬಯಸುವ ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ:01.07.2025ರಿಂದ ದಿನಾಂಕ:10.08.2025ರವರೆಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಅದರಂತೆ ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿ ಮೈಸೂರು ಮತ್ತು 38 ಪ್ರಾದೇಶಿಕ ಕೇಂದ್ರಗಳಲ್ಲಿ ಒಟ್ಟು 6309 ವಿದ್ಯಾರ್ಥಿಗಳು ವಿವಿಧ ಕೋರ್ಸುಗಳಿಗೆ ಅರ್ಜಿ ಸಲ್ಲಿಸಿದ್ದು, ವಿಶ್ವವಿದ್ಯಾನಿಲಯದ ವತಿಯಿಂದ 5720 ವಿದ್ಯಾರ್ಥಿಗಳ ಅರ್ಜಿಗಳು ಪ್ರಾಥಮಿಕ ಪರಿಶೀಲನೆ ಆಗಿರುತ್ತದೆ. ಈ ಅರ್ಜಿಗಳ ಪೈಕಿ 5332 ವಿದ್ಯಾರ್ಥಿಗಳ ಅರ್ಜಿಗಳು (ಅಂದಾಜು ವೆಚ್ಚ ರೂ.13,08,74,790/-) ಅ.ಸಂ.ಇಲಾಖೆಯ ವತಿಯಿಂದಲೂ ಪರಿಶೀಲಿಸಲ್ಪಟ್ಟು ಪ್ರವೇಶಾತಿಗೆ ಪರಿಗಣಿಸಲಾಗಿರುತ್ತದೆ. 30 ಅರ್ಜಿಗಳು ಇಲಾಖೆಯಿಂದ ತಿರಸ್ಕರಿಸಲ್ಪಟ್ಟಿರುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಅಲ್ಪ ಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರು ತಮ್ಮ ಇಲಾಖೆಯ ವ್ಯಾಪ್ತಿಗೊಳಪಡುವ ವಿದ್ಯಾರ್ಥಿಗಳ ಪ್ರವೇಶಾತಿಗೆ ರಿಯಾಯಿತಿ ನೀಡಲು ಮಾನ್ಯ ಕುಲಪತಿಗಳೊಂದಿಗೆ ಹಲವಾರು ಬಾರಿ ಮೌಖಿಕವಾಗಿ ಕೋರಲಾದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಈ ಬಗ್ಗೆ ಚರ್ಚಿಸಿ ಕ್ರಮವಹಿಸುವ ಸಲುವಾಗಿ ತಮ್ಮ ಅಧ್ಯಕ್ಷತೆಯಲ್ಲಿ ಶಾಸನಬದ್ಧ ಅಧಿಕಾರಿಗಳೊಂದಿಗೆ ದಿನಾಂಕ: 12.08.2025ರಂದು ನಡೆದ ಸಭೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದ ಯಾವುದೇ ಅನುದಾನವಿಲ್ಲದಿರುವುದು ಹಾಗೂ ವಿದ್ಯಾರ್ಥಿಗಳ ಶುಲ್ಕದಿಂದಲೇ ಖರ್ಚು ವೆಚ್ಚಗಳನ್ನು ನಿರ್ವಹಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಇಲಾಖೆಯ ಅನುದಾನದಡಿಯಲ್ಲಿನ ಈ ಯೋಜನೆಯಿಂದ ವಿವಿ ನಿಲಯಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಸಾಕಷ್ಟು ಚರ್ಚೆಯ ನಂತರ ಅಲ್ಪ ಸಂಖ್ಯಾತರ ನಿರ್ದೇಶನಾಲಯದಿಂದ ವಿದ್ಯಾರ್ಥಿಗಳ ಪರವಾಗಿ ಪಾವತಿಸಲ್ಪಡುವ ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳ ಪ್ರವೇಶಾತಿಯ ಒಟ್ಟಾರೆ ಶುಲ್ಕದ (ಪ್ರವೇಶ ಶುಲ್ಕ + ಪರೀಕ್ಷಾ ಶುಲ್ಕ) ಮೊತ್ತದಲ್ಲಿ ಶೇಕಡ

ಕುಲಪತಿಗಳು

ಕುಲಸಚಿವರು

12% (ಹನ್ನೆರಡು) ರಿಯಾಯಿತಿಯನ್ನು ನೀಡಿ, ಆ ರಿಯಾಯಿತಿ ಮೊತ್ತಕ್ಕೆ ಅಗತ್ಯ ಹೆಚ್ಚುವರಿ ಅಲ್ಪ ಸಂಖ್ಯಾತರ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸುವ ಮೂಲಕ ರಿಯಾಯಿತಿ ಮೊತ್ತವನ್ನು ಸರಿದೂಗಿಸಲು ಸರ್ವಾನುಮತದಿಂದ ತೀರ್ಮಾನವಾಗಿರುತ್ತದೆ.

ಸರ್ಕಾರದ ಆಶಯದ ಈ ಯೋಜನೆಯ ಅನುಷ್ಠಾನದ ಕುರಿತು ದಿ:12.08.2025ರ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಶೇಕಡ 12%ರಂತೆ ರಿಯಾಯಿತಿ ನೀಡುವ ಸಂಬಂಧದಲ್ಲಿ ಅನುಮೋದನೆ ಕೋರಿ ದಿನಾಂಕ:13.08.2025 ರಂದು ನಡೆದ 65ನೇ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯ (ವಿ.ಸಂ:67.19) ವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿ, ದಿನಾಂಕ: 12.08.2025ರ ಸಭೆಯ ತೀರ್ಮಾನಕ್ಕೆ ಅನುಮೋದನೆ ನೀಡಿರುತ್ತದೆ.

ಈ ಯೋಜನೆಯಡಿ ಅಂತಿಮವಾಗಿ 5328 ವಿದ್ಯಾರ್ಥಿಗಳು ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದು, ಇದರ ಒಟ್ಟಾರೆ ಮೊತ್ತ ರೂ:13,06,45,430/- ಆಗಿದ್ದು, ಇದರಲ್ಲಿ ಮೇಲಿನ ತೀರ್ಮಾನದಂತೆ ಶೇಕಡ 12%ರಷ್ಟು ರಿಯಾಯಿತಿಯನ್ನು ನೀಡಬೇಕಿದ್ದು, ಈ ಹಣಕ್ಕೆ ಆ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಗೆ ಪರಿಗಣಿಸಿ ಹೊಂದಾಣಿಕೆ ಮಾಡಿಕೊಳ್ಳಬೇಕಿದೆ. **ಹೀಗಾಗಿ ಈ ಯೋಜನೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ರೂ:.11,49,67,978/- (13,06,45,430 - 1,56,77,452) ಬರಬೇಕಾಗುತ್ತದೆ.**

ಈ ಪೈಕಿ ಅಲ್ಪ ಸಂಖ್ಯಾತರ ನಿರ್ದೇಶನಾಲಯವು ದಿನಾಂಕ:06.09.2025ರಂದು 5 ಕೋಟಿ ಹಾಗೂ ದಿನಾಂಕ:09.10.2025 ರಂದು ಎರಡನೇ ಕಂತಾಗಿ 5 ಕೋಟಿ ರೂಗಳನ್ನು ವಿವಿ ನಿಲಯಕ್ಕೆ ಪಾವತಿಸಿರುತ್ತದೆ. ಇದರಿಂದ ಒಟ್ಟಾರೆ 10 ಕೋಟಿರೂಗಳು ವಿವಿ ನಿಲಯಕ್ಕೆ ಬಂದಂತಾಗಿರುತ್ತದೆ. ಉಳಿದ ಬಾಕಿ ಶುಲ್ಕಕ್ಕೆ (ರೂ:1,49,67,978/- ಒಂದು ಕೋಟಿ ನಲವತ್ತೊಂಬತ್ತು ಲಕ್ಷದ ಅರವತ್ತೇಳು ಸಾವಿರದ ಒಂಭೈನೂರ ಎಪ್ಪತ್ತೆಂಟು ರೂಪಾಯಿಗಳು ಮಾತ್ರ) ಅಂತಿಮ ಪ್ರಸ್ತಾವನೆ ಕಳುಹಿಸಬೇಕಿದೆ.

**3. ಆಹಾರ ಪೋಷಣೆ ಸಂಬಂಧಿತ ಹಾಗೂ ಕೆಲವು ವಿಜ್ಞಾನ ವಿಷಯಗಳ ಕೋರ್ಸುಗಳನ್ನು ಯುಜಿಸಿ ಹಿಂಪಡೆದಿರುವ ಕುರಿತು:**

ಯುಜಿಸಿಯು ದಿನಾಂಕ: 12.08.2025ರಂದು ಹೊರಡಿಸಿರುವ ತನ್ನ ಸಾರ್ವಜನಿಕ ತಿಳುವಳಿಕೆ ಪತ್ರ ಹಾಗೂ ನಂತರದ ಪ್ರಕಟಣೆಯಲ್ಲಿ NCAHP Act 2021 ಗೆ ಒಳಪಡುವ ವಿಷಯಗಳ ಶೈಕ್ಷಣಿಕ ಕಾರ್ಯ ಕ್ರಮಗಳನ್ನು ODL & OL ಮಾದರಿಯಲ್ಲಿ ನಡೆಸದಂತೆ ದೇಶಾದ್ಯಂತ ಇರುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ಪಷ್ಟ ಸೂಚನೆ ನೀಡಿದ್ದು, ಅದರಡಿ 1. Psychology, 2. Microbiology, 3.Food & Nutrition Science, 4.Bio Technology & 5.Clinical Nutrition & Dietetics & 6.Bio Chemistry ವಿಷಯಗಳಲ್ಲಿ ಶೈಕ್ಷಣಿಕ ಕಾರ್ಯ ಕ್ರಮಗಳನ್ನು ನಡೆಸದಂತೆ ನಿರ್ಬಂಧಿಸಲಾಗಿರುತ್ತದೆ. ಈ ಬಗ್ಗೆ ದಿನಾಂಕ: 19.08.2025 ರಂದು ನಡೆದ ವಿಶ್ವವಿದ್ಯಾನಿಲಯದ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸದರಿ ವಿಷಯಗಳಿಗೆ ಒಳಪಡುವ ಕೆಳಕಂಡ ಕೋರ್ಸುಗಳ ಪ್ರವೇಶಾತಿಯನ್ನು ತಡೆಹಿಡಿಯಲು ಹಾಗೂ ಈಗಾಗಲೇ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಬಯಸಿದಲ್ಲಿ ಇತರೆ ಅರ್ಹ ಕೋರ್ಸುಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸುವುದು, ವಿದ್ಯಾರ್ಥಿಗಳು ಇತರೆ ಕೋರ್ಸುಗಳನ್ನು ಅಧ್ಯಯನ ಮಾಡಲು ಒಪ್ಪದಿದ್ದಲ್ಲಿ ಅವರು ಪಾವತಿಸಿರುವ ಸಂಪೂರ್ಣ ಹಣವನ್ನು ಹಿಂಪಾವತಿಸಲು ತೀರ್ಮಾನವಾಗಿರುತ್ತದೆ. ಈ ಸಂಬಂಧ ಡೀನ್(ಶೈ) ವಿಭಾಗವು ದಿನಾಂಕ:16.09.2025 ರಂದು ಆದೇಶವನ್ನೂ ಸಹ ಹೊರಡಿಸಿರುತ್ತದೆ.

i. M.Sc. in Psychology, Micro Biology, Bio Technology, Clinical Nutrition & Dietetics, Food & Nutrition Science & Bio Chemistry --- 6 Programmes.

ii. PGC in Nutrition & Dietetics.

iii. UG Diploma in Nutrition & Health Education.

iv. UG Certificate in Nutrition & Food (Total 9 Programmes)

ಕುಲಪತಿಗಳು ಕುಲಸಚಿವರು

4. <u>ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮವನ್ನು ಪುನರ್ ಪ್ರಾರಂಭಿಸುವ ಕುರಿತು:</u>

ಹಾಗೆಯೇ, ಬಿ.ಇಡಿ. ಶೈಕ್ಷಣಿಕ ಕಾರ್ಯಕ್ರಮಕ್ಕೆ ಅನುಮತಿಸುವ ಸಂಬಂಧದಲ್ಲಿ ಯುಜಿಸಿಯ ಎಸ್‌ಎಸಿಯ ಶಿಫಾರಸ್ಸು ಕುರಿತು ಯುಜಿಸಿಯ ಡೆಬ್ ನವರು ದಿನಾಂಕ: 27.08.2025ರ ಇ-ಮೇಲ್ ಸಂದೇಶದ ಮೂಲಕ ಕಳುಹಿಸಿದ್ದು, ಈ ಬಗ್ಗೆ ಡೀನ್(ಶೈ) ರವರು ದಿನಾಂಕ:01.09.2025 ರ ತಮ್ಮ ಟಿಪ್ಪಣಿಯಲ್ಲಿ 2025-26ರ ಜುಲೈ ಆವೃತ್ತಿಯಲ್ಲಿ ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮವನ್ನು ಪ್ರವೇಶಾತಿ ಮಾಡಲು ಕ್ರಮವಹಿಸುವಂತೆ ತಿಳಿಸಿರುತ್ತಾರೆ.

ಯುಜಿಸಿ ನಿರ್ದೇಶನದ ವಿಜ್ಞಾನ ವಿಷಯಗಳ ಹಿಂಪಡೆಯುವಿಕೆ, ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸಿಕ್ಕಿರುವ ಅನುಮತಿಯನ್ನೊಳಗೊಂಡಂತೆ ದಿನಾಂಕ: 01.09.2025ರಂದು ಪರಿಷ್ಕೃತ ಅಧಿಸೂಚನೆ ಯನ್ನು ಹೊರಡಿಸಲಾಗಿರುತ್ತದೆ.

ಬಿ.ಇಡಿ ಪ್ರವೇಶಾತಿ ಕೋರಿ ಬಂದ ಅರ್ಜಿಗಳ ಪೈಕಿ ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷಾ ವಿಭಾಗವು 8 ಪರೀಕ್ಷಾ ಕೇಂದ್ರಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ದಿನಾಂಕ:28.09.2025ರಂದು ನಡೆಸಿ, ವಿವಿಯ ಜಾಲತಾಣದಲ್ಲಿ ಪ್ರಕಟಿಸಿ, ವಿವರವನ್ನು ಪ್ರವೇಶಾತಿ ವಿಭಾಗಕ್ಕೆ ನೀಡಲಾಗಿ, ವಿವರಣಾ ಪುಸ್ತಕದಲ್ಲಿ ವಿವರಿಸಿರುವಂತೆ ಅರ್ಹ ಅಭ್ಯರ್ಥಿಗಳನ್ನು ನೇಮಕಗೊಂಡಿದ್ದ ಆಯ್ಕೆ ಸಮಿತಿಯು ನಿಯಮಾನುಸಾರ ಸೀಟ್ ಮಾಟ್ರಿಕ್ಸ್‌ನಂತೆ ಮೀಸಲಾತಿ ನಿಯಮವನ್ನು ಅನುಸರಿಸಿ ಸಿಇಟಿಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ನಾಲ್ಕು ರೌಂಡ್‌ಗಳಲ್ಲಿ ಅರ್ಹ ಅಭ್ಯರ್ಥಿಗಳನ್ನು ಗುರುತಿಸಿ ಜಾಲತಾಣದಲ್ಲಿ ಪ್ರಕಟಿಸಿ, ಪ್ರತೀ ಅಭ್ಯರ್ಥಿಗೆ ಎಸ್‌ಎಂಎಸ್ ಸಂದೇಶ ಕಳುಹಿಸುವ ಮೂಲಕ ಮಾಹಿತಿ ನೀಡಿ, ಏರ್ಪಡಿಸಿದ್ದ ಸಮಾಲೋಚನೆ ಕಮ್ ಪ್ರವೇಶಾತಿಯಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಿ, ಅರ್ಹರನ್ನು ಆಯ್ಕೆ ಮಾಡಿ 500 ಸೀಟುಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗಿರುತ್ತದೆ.

ಯುಜಿಸಿಯು ಈ ಮಧ್ಯೆ ಪ್ರವೇಶಾತಿಯ ಅಂತಿಮ ದಿನಾಂಕವನ್ನು ದಿನಾಂಕ:15.09.2025 ರಿಂದ 15.10.2025ಕ್ಕೆ ಪರಿಷ್ಕರಿಸಿ ವಿಸ್ತರಿಸಿರುತ್ತದೆ.

**ಯುಜಿಸಿಯು ಈ ಆವೃತ್ತಿಯ ಪ್ರವೇಶಾತಿಯನ್ನು ಅಂತಿಮವಾಗಿ ದಿನಾಂಕ:15.10.2025ರಂದು ಪೂರ್ಣ ಗೊಳಿಸಬೇಕೆಂದು ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ಅಂತಿಮವಾಗಿ ಒಟ್ಟಾರೆ 32,183 ವಿದ್ಯಾರ್ಥಿಗಳು 66 ಶೈಕ್ಷಣಿಕ ಕಾರ್ಯಕ್ರಮ** (UG-09, PG-31, PG Certificate-13, UG Diploma-09 & UG Certificate – 04) **ಗಳಿಗೆ ಪ್ರವೇಶಾತಿ ಪಡೆದಿದ್ದು, ಅಷ್ಟೂ ವಿದ್ಯಾರ್ಥಿಗಳ ದಾಖಲಾತಿಗಳನ್ನು ರಿವರ್ಸ್ ಎಪಿಐ ಮೂಲಕ ಯುಜಿಸಿಯ ಡೆಬ್ ಪೋರ್ಟಲ್‌ನಲ್ಲಿ ಎಬಿಸಿ ಮತ್ತು ಡೆಬ್ ಐಡಿಯ ವಿವರಗಳೊಂದಿಗೆ ದಿನಾಂಕ:15.10.2025ರಂದು ಅಪ್‌ಲೋಡ್ ಮಾಡುವ ಮೂಲಕ ಪ್ರವೇಶಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ಬಾರಿಯ ಪ್ರವೇಶಾತಿಯಲ್ಲಿ 13280 ಪುರುಷ ವಿದ್ಯಾರ್ಥಿ ಗಳು, 18896 ಮಹಿಳಾ ವಿದ್ಯಾರ್ಥಿಗಳು ಹಾಗೂ 07 ಮಂದಿ ಟ್ರಾನ್ಸ್‌ಜೆಂಡರ್ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಇದು ಇತ್ತೀಚಿನ ಶೈಕ್ಷಣಿಕ ಸಾಲಿನ ಆವೃತ್ತಿಗಳ ಪ್ರವೇಶಾತಿಗೆ (23-24 ಮತ್ತು 24-25ರ ಜುಲೈ ಆವೃತಿಗಳ ಪ್ರವೇಶಾತಿಗೆ) ಹೋಲಿಕೆ ಮಾಡಿದಲ್ಲಿ ಪ್ರವೇಶಾತಿಯಲ್ಲಿ ಶೇಕಡ 25%ಕ್ಕೂ ಮಿಗಿಲಾಗಿ ಹೆಚ್ಚಳವಾಗಿರುತ್ತದೆ.**

2025-26ರ ಜುಲೈ ಆವೃತ್ತಿಯ ಪ್ರವೇಶಾತಿ ಕುರಿತಂತೆ ಸಂಪೂರ್ಣ ವಿವರಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಗಮನಕ್ಕೆ ತರುತ್ತಾ;

1. 2025-26ರ ಜುಲೈ ಆವೃತ್ತಿಯಲ್ಲಿ ಪ್ರವೇಶ ಪಡೆದ ಒಟ್ಟಾರೆ 32,183 ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆಗೆ ಅನುಮೋದನೆ ಕೋರಿದೆ.

2. ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿ ಸಂಬಂಧದಲ್ಲಿ ಒಟ್ಟಾರೆ ಪ್ರವೇಶಾತಿ ಶುಲ್ಕದಲ್ಲಿ ಶೇಕಡ 12%ರಷ್ಟು ರಿಯಾಯಿತಿಯನ್ನು ಅಲ್ಪ ಸಂಖ್ಯಾತರ ಇಲಾಖೆಗೆ ನೀಡಿ, ಆ ಮೊತ್ತಕ್ಕೆ

ಕುಲಪತಿಗಳು

ಕುಲಸಚಿವರು

ಅ.ಸಂ.ವರ್ಗದ ಮಕ್ಕಳಿಗೆ ಹೆಚ್ಚುವರಿಯಾಗಿ ಪ್ರವೇಶಾತಿ ನೀಡಿ ರಿಯಾಯಿತಿ ಮೊತ್ತಕ್ಕೆ ಸರಿದೂಗಿಸಲು ಕೈಗೊಂಡಿರುವ ಕ್ರಮಕ್ಕೆ ಅನುಮೋದನೆ ಕೋರಲಾಗಿ, ದಿನಾಂಕ:02.12.2025ರಂದು ನಡೆದ 92ನೇ ಹಣಕಾಸು ಸಮಿತಿ ಸಭೆಯಲ್ಲಿ ವಿ.ಸಂಖ್ಯೆ:92.24ರ ವಿಷಯದ ಕುರಿತು "ಅಲ್ಪಸಂಖ್ಯಾತ ನಿರ್ದೇಶನಾಲಯವು 2025-26ರ ಜುಲೈ ಆವೃತ್ತಿಯಲ್ಲಿ ಕಲ್ಪಿಸಿದ್ದ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದ್ದ ಅಲ್ಪಸಂಖ್ಯಾತ ವರ್ಗದ ಅಷ್ಟೂ ವಿದ್ಯಾರ್ಥಿಗಳ (5328) ಪರವಾಗಿ ಶುಲ್ಕವನ್ನು ಭರಿಸುತ್ತಿರುವುದರಿಂದ ವಿವಿ ನಿಲಯವು ನೀಡುತ್ತಿರುವ ಶೇಕಡ 12%ರ ರಿಯಾಯಿತಿ ಮೊತ್ತಕ್ಕೆ ಹೆಚ್ಚುವರಿ ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸಿ ರಿಯಾಯಿತಿ ಮೊತ್ತವನ್ನು ಸರಿದೂಗಿಸಿಕೊಳ್ಳುವ ಪ್ರಮೇಯ ಉದ್ಭವವಾಗುವುದಿಲ್ಲವಾದ್ದರಿಂದ ಎಷ್ಟು ವಿದ್ಯಾರ್ಥಿಗಳ ಪರವಾಗಿ ಸದರಿ ಇಲಾಖೆಯು ಶುಲ್ಕ ಭರಿಸುತ್ತದೆಯೋ ಅಷ್ಟೂ ವಿದ್ಯಾರ್ಥಿಗಳ ಶುಲ್ಕದಲ್ಲಿ ಶೇಕಡ 12% ರಿಯಾಯಿತಿಯನ್ನು ಅಲ್ಪಸಂಖ್ಯಾತರ ಇಲಾಖೆಗೆ ನೀಡುವ ಮಟ್ಟಿಗೆ ತೀರ್ಮಾನವನ್ನು ತಿದ್ದುಪಡಿ ಮಾಡಿ ಅನುಮೋದಿಸಿರುತ್ತದೆ.

ಇನ್ನು ಮುಂದೆಯೂ ಇದೇ ಕ್ರಮವನ್ನು ಅನುಸರಿಸಲು ಹಾಗೂ ಈಗ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿ ಈ ಅಂಶವನ್ನು ಸೇರಿಸಿ ಅನುಸರಿಸಲು ತೀರ್ಮಾನಿಸಲಾಗಿರುತ್ತದೆ.

ಯುಜಿಸಿ ನಿರ್ಬಂಧಿತ ಕೋರ್ಸುಗಳಿಗೆ ಈಗಾಗಲೇ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳ ಪೈಕಿ ಪರ್ಯಾಯ ಕೋರ್ಸನ್ನು ವ್ಯಾಸಂಗ ಮಾಡಲು ಇಚ್ಛಿಸದೇ ಶುಲ್ಕ ಮರುಪಾವತಿ ಕೋರಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಯು ಪಾವತಿಸಿರುವ ಪೂರ್ಣ ಶುಲ್ಕವನ್ನು ಹಿಂಪಾವತಿಸಲು ಕ್ರಮವಹಿಸಿರುವ ಪ್ರಕ್ರಿಯೆಗೆ ಅನುಮೋದನೆ ಕೋರಿದೆ.

*****

ಈ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ 2025-26ರ ಭಾಷಣ ಕಂಡಿಕೆ-220ರಲ್ಲಿ "ಪದವಿ ಶಿಕ್ಷಣದಿಂದ ವಂಚಿತರಾಗುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರು ಹಜ್ ಭವನದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (KSOU) ಪ್ರಾದೇಶಿಕ ಕೇಂದ್ರ ತೆರೆದು, ವಿವಿಧ ಪದವಿ/ಸ್ನಾತಕೋತ್ತರ ಪದವಿ ಶಿಕ್ಷಣ ನೀಡಲಾಗುವುದು" ಎಂದು ಘೋಷಿಸಿ ಅವರುಗಳಿಗೆ ಉಚಿತ ಪ್ರವೇಶಾತಿಗೆ ಅವಕಾಶಗಳನ್ನು ಕಲ್ಪಿಸಲಾಗಿದ್ದು, ಎಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಉಚಿತ ಪ್ರವೇಶಾತಿ ಪಡೆದಿರುತ್ತಾರೆ ಆ ಸಂಖ್ಯೆಗೆ ಅನುಗುಣವಾದ ಪ್ರವೇಶಾತಿ ಶುಲ್ಕವನ್ನು ಅಲ್ಪಸಂಖ್ಯಾತ ಅಭಿವೃದ್ಧಿ ಮಂಡಳಿಯಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ನೀಡಿರುತ್ತಾರೆಂದು ಸಭೆಗೆ ವಿವರಿಸಿದರು.

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಎಷ್ಟು ವಿದ್ಯಾರ್ಥಿಗಳ ಪರವಾಗಿ ಅಲ್ಪಸಂಖ್ಯಾತ ಇಲಾಖೆಯು ಶುಲ್ಕ ಭರಿಸುತ್ತದೆಯೋ ಅಷ್ಟೂ ವಿದ್ಯಾರ್ಥಿಗಳ ಶುಲ್ಕದಲ್ಲಿ ಶೇಕಡ 12% ರಿಯಾಯಿತಿಯನ್ನು ಅಲ್ಪಸಂಖ್ಯಾತರ ಇಲಾಖೆಗೆ ಭರಿಸುವ ಬಗ್ಗೆ ಹಾಗೂ ಇನ್ನು ಮುಂದೆಯೂ ಇದೇ ಕ್ರಮವನ್ನು ಅನುಸರಿಸಲು ಹಾಗೂ ಈಗ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿ ಈ ಅಂಶವನ್ನು ಸೇರಿಸಿ ಅನುಸರಿಸಲು ಮತ್ತು ಯುಜಿಸಿ ನಿರ್ಬಂಧಿತ ಕೋರ್ಸುಗಳಿಗೆ ಈಗಾಗಲೇ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳ ಪೈಕಿ ಪರ್ಯಾಯ ಕೋರ್ಸನ್ನು ವ್ಯಾಸಂಗ ಮಾಡಲು ಇಚ್ಛಿಸದೇ ಶುಲ್ಕ ಮರುಪಾವತಿ ಕೋರಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಯು ಪಾವತಿಸಿರುವ ಪೂರ್ಣ ಶುಲ್ಕವನ್ನು ಹಿಂಪಾವತಿಸುವ ಪ್ರಕ್ರಿಯೆಗೆ ಸಭೆಯು ಅನುಮೋದನೆ ನೀಡಿತು.**

#####

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 185.04**

**ವಿಷಯ: 39ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಸಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ:12–12–2025ರಂದು ನಡೆದ 39ನೇ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನದ ನಡಾವಳಿಯನ್ನು ಮುಂಬರುವ 185ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

****

**ವಿಷಯ ಸಂಖ್ಯೆ: 39.01 ರ ವಿಷಯಕ್ಕೆ ಸಂಬಂಧಿಸಿದಂತೆ:**

ಈ ವಿಷಯದ ಬಗ್ಗೆ ಸರ್ಕಾರದ ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ ಈ ಬಗ್ಗೆ ವಿವರಗಳನ್ನು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, 2013–14, 2014–15ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಿಂದ ನಡೆಸುವ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದು ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಆ ಸಂದರ್ಭದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಕೋರ್ಸುಗಳು ಮಾನ್ಯತೆ ರದ್ದಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಯುಜಿಸಿ–ಡಿಇಬಿ ರವರು ವಿಶ್ವವಿದ್ಯಾನಿಲಯದಿಂದ ನಡೆಸುತ್ತಿದ್ದ ಕೋರ್ಸುಗಳಿಗೆ ಯುಜಿಸಿ ಮಾನ್ಯತೆಯನ್ನು 2015 ರದ್ದುಗೊಳಿಸಿರುವ ಬಗ್ಗೆ ವಿಶ್ವವಿದ್ಯಾನಿಯಕ್ಕೆ ಒಂದು ನೋಟಿಸ್‌ಅನ್ನು ಹೊರಡಿಸಿತು.

ಮುಂದುವರೆದಂತೆ, ವಿಶ್ವವಿದ್ಯಾನಿಲಯದಲ್ಲಿ ಸಹಭಾಗಿತ್ವ ಸಂಸ್ಥೆಗಳು ಇಡೀ ಭಾರತದಾದ್ಯಂತ ಮತ್ತು ಹೊರ ದೇಶಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಗಿತ್ತು. ಈ ಬಗ್ಗೆ ಯುಜಿಸಿ–ಡಿಇಬಿಯಿಂದ ಯಾವುದೇ ಅನುಮೋದನೆ ಪಡೆಯದೇ ಸಹಭಾಗಿತ್ವ ಸಂಸ್ಥೆಗಳ ಮುಖಾಂತರ ಹಲವಾರು ಕೋರ್ಸುಗಳನ್ನು ನಡೆಸುತ್ತಿದ್ದರು. 2013–14, 2014–15ನೇ ಸಾಲಿನಿಂದ 2017ರವರೆಗೆ ಯಾವುದೇ ಕೋರ್ಸುಗಳನ್ನು ನಡೆಸಲು ಯುಜಿಸಿ–ಡಿಇಬಿ ರವರು ಅನುಮತಿಯನ್ನು ನೀಡಿರಲಿಲ್ಲ. ಆದುದರಿಂದ 2013–14, 2014–15ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ನೀಡಲು ಈಗಾಗಲೇ ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

*****

**ತೀರ್ಮಾನ :**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 39ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಸಡಾವಳಿಯನ್ನು ಸಭೆಯು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 185.04**

**ವಿಷಯ: ಡಾ. ಹೆಚ್.ಕೆ. ಜಗದೀಶ್ ಬಾಬು, ಸಹಾಯಕ ಪ್ರಾಧ್ಯಾಪಕ (ಅಮಾನತ್ತು), ಇವರ ಇಲಾಖಾ ವಿಚಾರಣೆಯ ವಿಚಾರಣಾ ವರದಿಯನ್ನು ಮಂಡಿಸುತ್ತಿರುವ ಕುರಿತು.**

– * –

ವಿಶ್ವವಿದ್ಯಾನಿಲಯದ ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ ಡಾ. ಜಗದೀಶ್ ಬಾಬು ಹೆಚ್ ಕೆ, ಸಹಾಯಕ ಪ್ರಾಧ್ಯಾಪಕರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಕರಾಮುವಿ, ಇವರನ್ನು ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–1/273/2023–24, ದಿನಾಂಕ:04.11.2023ರನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿ, ಇಲಾಖಾ ವಿಚಾರಣೆಯನ್ನು (ವಿಚಾರಣಾ ಸಂಖ್ಯೆ: 04/2024) ನಡೆಸಲು

ಕುಲಪತಿಗಳು ಕುಲಸಚಿವರು

ತೀರ್ಮಾನಿಸಿ, ಶ್ರೀ ಗೋಪಾಲ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಮತ್ತು ಶ್ರೀ ಮಹದೇವ ಪ್ರಸಾದ್ ಕೆ.ಎಸ್., ವಕೀಲರು, ಮೈಸೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕಮಾಡಲಾಗಿದ್ದು, ಸದರಿಯವರುಗಳು ವಿಚಾರಣೆಯನ್ನು ಪ್ರಾರಂಭಿಸಿದ್ದರು.

ವಿಚಾರಣಾಧಿಕಾರಿಗಳು ಅನಾರೋಗ್ಯ ಕಾರಣದಿಂದಾಗಿ ಹಾಗೂ ದೂರವಾಣಿ ಮತ್ತು ಪತ್ರದ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ ಸದರಿಯವರಿಂದ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಶ್ರೀ ಮಹಮದ್ ಖಾನ್ ಎಂ. ಪಠಾಣ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ದಿನಾಂಕ: 14.02.2025ರ ಆದೇಶದನ್ವಯ ನೇಮಕ ಮಾಡಲಾಗಿರುತ್ತದೆ ಹಾಗೂ ಮಂಡನಾಧಿಕಾರಿಗಳು ವೈಯುಕ್ತಿಕ ಕಾರಣದಿಂದಾಗಿ ಸದರಿ ವಿಚಾರಣೆಯಿಂದ ಬಿಡುಗಡೆಗೊಳಿಸುವಂತೆ ಕೋರಿದ್ದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಶ್ರೀ ಪಿ. ಮಂಜುನಾಥ್, ವಕೀಲರು, ಮೈಸೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ದಿನಾಂಕ: 11.07.2025ರ ಆದೇಶದನ್ವಯ ನೇಮಕ ಮಾಡಲಾಗಿರುತ್ತದೆ.

ನೇಮಕಗೊಂಡಿರುವ ವಿಚಾರಣಾಧಿಕಾರಿಗಳು, ಡಾ. ಜಗದೀಶ್ ಬಾಬುರವರ ವಿರುದ್ಧ ನಡೆಸಲಾಗುತ್ತಿದ್ದ ಇಲಾಖಾ ವಿಚಾರಣೆಯನ್ನು ಮುಂದುವರಿಸಿ, ಪೂರ್ಣಗೊಳಿಸಿ ಅಂತಿಮ ವಿಚಾರಣಾ ವರದಿಯನ್ನು ದಿನಾಂಕ: 11.12.2025ರಂದು ಶಿಸ್ತು ಪ್ರಾಧಿಕಾರವಾದ ಮಾನ್ಯ ಕುಲಪತಿಗಳಿಗೆ ಸಲ್ಲಿಸಿರುತ್ತಾರೆ. ಕರಾಮುವಿಯು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿ.ಸಿ.ಎ) ಪರಿನಿಯಮಗಳ ನಿಯಮ 12ರಲ್ಲಿ "Communication of Orders : Orders made by te disciplinary authority shall be communicated to the employee, who shall be supplied with a copy of the report of the enquiry, if any, held by the disciplinary authority and a copy of its findings, on each article of charge, or where the disciplinary authority is not the inquiring officer, a copy of the report of the inquiring officer and the statement of the findings of the disciplinary authority together with brief reasons for disagreement, if any with the findings of the inquiring officer.

Provided that it shall not be necessary to supply copies of the said documents where the disciplinay authority exonerates the employee or where such documents have already been supplied to the employee" ಎಂದಿರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯ ಪ್ರತಿಯನ್ನು ಆಪಾದಿತ ನೌಕರರಾದ ಡಾ. ಜಗದೀಶ್ ಬಾಬು ಇವರಿಗೆ ದಿನಾಂಕ: 11.02.2026ರ ಪತ್ರದ ಮೂಲಕ ರವಾನಿಸಿ, ಈ ಸಂಬಂಧ ತಮ್ಮ ಲಿಖಿತ ಹೇಳಿಕೆಯನ್ನು 10 (ಹತ್ತು) ದಿನಗಳ ಒಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ವಿಶ್ವವಿದ್ಯಾನಿಲಯವು ರವಾನಿಸಿರುವ ವಿಚಾರಣಾ ವರದಿಗೆ ಡಾ. ಜಗದೀಶ್ ಬಾಬುರವರು ದಿನಾಂಕ: 23.02.2026ರ ಪತ್ರ ಮೂಲಕ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ಪತ್ರದಲ್ಲಿ " . . . . . The Frivolous Enquiry and the modalities adopted to drag it mentioned above and continuing me under suspension till date resulted in severe harassment, mental agony, humiliation and degrading me before my colleagues, students, family members and the society in general. The department of Public Administration of the University lost its growth. Hope the Final Reportin Enquiry No: 04/2024 dt: 11.12.2025 has put an end to all the pinpricks and harassment.

Therefore, I an herewith once again requesting to reinstate me immediately, further release all my withheld academic, service and monetary benefits with arrears with effect from 01.11.2023, as I would have been intitled in the normal course and oblige" ಎಂದು ಲಿಖಿತ ವಿವರಣೆಯನ್ನು ಸಲ್ಲಿಸಿರುತ್ತಾರೆ. ಡಾ. ಜಗದೀಶ್ ಬಾಬುರವರು ಸಲ್ಲಿಸಿರುವ ಲಿಖಿತ

ಕುಲಪತಿಗಳು

ಕುಲಸಚಿವರು

ವಿವರಣೆಯನ್ನು ಹಾಗೂ ಮೇಲಿನ ಎಲ್ಲಾ ಅಂಶವನ್ನು ಅವಗಾಹನೆಗೆ ತರುತ್ತಾ, ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಉಪಕಾರ್ಯದಶಿಗಳ ಪತ್ರ ಸಂಖ್ಯೆ: GS 04 KOM 2025 Date: 20.02.2026 ರ ಪತ್ರದಲ್ಲಿ

**Sub: Complaint of K.G. Praveen, Former Registrar, KSOU regarding events that occurred in his office on 18.03.2025-reg.**

*****

With reference to the above mentioned subject, I am directed to inform you to conduct a departmental enquiry headed by a retired district judge against all persons involved and submit the report within 3 months under intimation to this office and also to keep Mr. Jagadeesh Babu under suspension till completion of enquiry and to initiate suitable criminal action against persons interfering in the enquiry, in case of any such interference.

ಎಂದು ತಿಳಿಸಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.

ಮುಂದುವರೆದು, ಪ್ರೊ. ಕೆ.ಬಿ. ಪ್ರವೀಣ ರವರು ಕುಲಸಚಿವರಾಗಿ ಇದ್ದ ಸಂದರ್ಭದಲ್ಲಿ ಡಾ. ಜಗದೀಶ್ ಬಾಬುರವರು ಅಸಭ್ಯವಾಗಿ ವರ್ತಿಸಿದ್ದರು. ಸದರಿಯವರನ್ನು ಸಸ್ಪೆಂಡೆ ಮಾಡಿ ಈಗಾಗಲೇ ಎರಡುವರೆ ವರ್ಷಗಳಾಗಿರುತ್ತದೆ ಎಂದು ತಿಳಿಸಿದರು.

ಈಗಾಗಲೇ ಸದರಿಯವರು ಸಸ್ಪೆಂಡ್ ಆದ 6 ತಿಂಗಳ ಒಳಗೆ ವಿಚಾರಣೆಯನ್ನು ನಡೆಸಬೇಕಾಗಿರುತ್ತದೆಂದು ಡಾ. ಮಹೇಶ್ .ಎಸ್ ರವರು ಹಾಗೂ ಉಪಕಾರ್ಯದರ್ಶಿಗಳು ಹಣಕಾಸು ಮತ್ತು ಉನ್ನತ ಶಿಕ್ಷಣ ಇಲಾಖೆ ರವರು ಸಭೆಗೆ ತಿಳಿಸಿದರು.

ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ ಈಗಾಗಲೇ ವಿಚಾರಣೆ ಮುಗಿದಿದೆಯೇ, ವರದಿಯಲ್ಲಿ ಏನೆಂದಿರುತ್ತದೆಂದು ಕೇಳಿದರು.

ಕುಲಸಚಿವರು ಮಾತನಾಡಿ ಡಾ. ಜಗದೀಶ್ ಬಾಬುರವರ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ಕಳೆದ ವಿಚಾರಣೆಯಲ್ಲಿ ಒಬ್ಬರು ನ್ಯಾಯಾಧೀಶರನ್ನು ನೇಮಕ ಮಾಡಲಾಯಿತು. ಕೆಲವು ದಿನಗಳ ನಂತರ ಆ ನ್ಯಾಯಾಧೀಶರು ಕೆಲವು ಕಾರಣಗಳಿಂದ ಈ ವಿಚಾರಣೆಗೆ ಹಾಜರಾಗಲಿಲ್ಲ. ನಂತರದ ದಿನಗಳಲ್ಲಿ ಮತ್ತೊಬ್ಬರು ನ್ಯಾಯಾಧೀಶರನ್ನು ನೇಮಕ ಮಾಡಲಾಯಿತು ವಿಚಾರಣೆ ನಡೆಸಲಾಯಿತು. ಸದರಿ ವಿಚಾರಣೆಗೆ ಸಂಬಂಧಿಸಿದಂತೆ ಮೂವರು ಸಾಕ್ಷಿಗಳಿದ್ದು, ಅವರುಗಳಲ್ಲಿ ಯಾರು ಸಹ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ, ಯಾರು ಸಹ ಹಾಜರಾಗಲಿಲ್ಲವೆಂದು ತಿಳಿಸಿದರು.

ಡಾ. ಮಹೇಶ್ .ಎಸ್ ರವರು ಮಾತನಾಡಿ ವಿಚಾರಣಾ ವರದಿಯಲ್ಲಿ ಯಾವುದೇ ತಪ್ಪುಗಳು ಬಾರದ ಕಾರಣ ಈ ಆಧಾರದ ಮೇಲೆ ಅಮಾನತ್ತಿನ ಆದೇಶವನ್ನು ಹಿಂತೆಗೆದುಕೊಂಡು ಅವರಿಗೆ ಕರ್ತವ್ಯ ನಿರ್ವಹಣೆ ಮಾಡುವ ಸಂಬಂಧ ಆದೇಶ ಹೊರಡಿಸಬೇಕೆಂದು ತಿಳಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಮಾತನಾಡಿ ವಿಚಾರಣಾ ವರದಿಯಲ್ಲಿ ಏನನ್ನು ಇತ್ಯರ್ಥಗೊಳಿಸಿದ್ದಾರೆ. ಈ ಬಗ್ಗೆ ಕುಲಪತಿಗಳು ತಿಳಿಸಬೇಕೆಂದರು.

ವಿಚಾರಣಾ ವರದಿಯ ಆಧಾರದ ಬಗ್ಗೆ ಪೂರ್ಣ ವಿವರಗಳನ್ನು ಪರಿಶೀಲಿಸಿ ಮುಂದಿನ ಕ್ರಮ ವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.

ಸಿಸಿಎ ನಿಯಮಗಳ ವರದಿ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಶಿಸ್ತು ಪ್ರಾಧಿಕಾರವೇ ತೀರ್ಮಾನಿಸಬೇಕಾಗಿರುತ್ತದೆಂದು ಉಪಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಸಭೆಗೆ ತಿಳಿಸಿದರು.

#####

ಕುಲಪತಿಗಳು

ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಡಾ. ಜಗದೀಶ್ ಬಾಬುರವರ ವಿರುದ್ಧ ನಡೆಸಲಾಗುತ್ತಿದ್ದ ಇಲಾಖಾ ವಿಚಾರಣೆಯ ವರದಿ ಆಧಾರದ ಮೇಲೆ ಮತ್ತು ಮಾನ್ಯ ಘನತೆವೆತ್ತ ಕುಲಾಧಿಪತಿಗಳಿಂದ ಬಂದಿರುವ ಪತ್ರದ ಅನುಸಾರ ಸದರಿಯವರ ಬಗ್ಗೆ ಶಿಸ್ತು ಪ್ರಾಧಿಕಾರದ ಅಧ್ಯಕ್ಷರಾದ ಕುಲಪತಿಗಳು ನಿರ್ಣಯವನ್ನು ಕೈಗೊಳ್ಳಬೇಕಾಗಿರುತ್ತದೆ.ಈ ಬಗ್ಗೆ ನಿರ್ಣಯದ ವರದಿಯನ್ನು ಸಿದ್ಧಪಡಿಸಿ, ಮುಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಮಂಡಿಸಲು ಸಭೆಯು ತೀರ್ಮಾನಿಸಿತು.

#####

**ವಿಷಯ ಸಂಖ್ಯೆ: 185.06**

ವಿಷಯ: ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ ಟೋನರ್‌ಗಳನ್ನು ಖರೀದಿಸಲು ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಅರ್ಹ ಟೆಂಡದಾರರನ್ನು ಅಂತಿಮಗೊಳಿಸುವ ಬಗ್ಗೆ.

– * –

ವಿಶ್ವವಿದ್ಯಾನಿಲಯದಲ್ಲಿರುವ ವಿಭಾಗಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಖರೀದಿಸುವ ಸಂಬಂಧ ಟೆಂಡರ್‌ನ ಅಂದಾಜು ಮೌಲ್ಯವನ್ನು ರೂ. 1,30,00,000/- (ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ನಿಗದಿಪಡಿಸಿ ಕೆ.ಟಿ.ಪಿ.ಪಿ ಕಾಯ್ದೆ/ನಿಯಮಗಳನ್ವಯ ದಿನಾಂಕ: 04.02.2026 ರಂದು E-Procurement ನ K.P.P.P (Karnataka Public Procurement Portal) ಮುಖಾಂತರ ಟೆಂಡರ್ ಆಹ್ವಾನಿಸಲಾಗಿತ್ತು ಟೆಂಡರ್ ಅನ್ನು ಅಂತಿಮಗೊಳಿಸುವ ಸಂಬಂಧ Tender Evaluation Committee ಯನ್ನು ರಚಿಸಲಾಗಿತ್ತು.

ಸದರಿ ಟೆಂಡರ್ ನಲ್ಲಿ, 01. Kanagraj Akila {M/s. SM Copiers And Service, Bangalore} 2. Soumya Venugopal {M/s. Sumukha Office Solutions, Mysuru} 03. Ashok Bhura Nor {M/s.Royal Print Technology, Bengaluru / Mumbai} 04. G Narasimha Murthy {M/s. Synergy Inc, Bengaluru} ಈ ನಾಲ್ಕು ಮಂದಿ ಬಿಡ್‌ದಾರರು ಬಿಡ್ ಗಳನ್ನು ಸಲ್ಲಿಸಿದ್ದರು.

ತಾಂತ್ರಿಕ ಬಿಡ್ ಅನ್ನು ಅಂತಿಮಗೊಳಿಸುವ ಸಂಬಂಧ ದಿನಾಂಕ: 18.03.2026 ರಂದು ನಡೆದ ಸಭೆಯಲ್ಲಿ 01. Kanagraj Akila {M/s. SM Copiers And Service, Bangalore} ಮತ್ತು 03. Ashok Bhura Nor {M/s. Royal Print Technology, Bengaluru/Mumbai} ಈ ಎರಡು ಸಂಸ್ಥೆಯವರು ಟೆಂಡರ್ ನಲ್ಲಿ ಕೋರಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸದ ಕಾರಣ ಇವರ ತಾಂತ್ರಿಕ ಬಿಡ್ ಅನ್ನು ತಿರಸ್ಕರಿಸಿ ಶಿಫಾರಸ್ಸು ಮಾಡಿತ್ತು.

ಉಳಿದ ಎರಡು ಸಂಸ್ಥೆಗಳಾದ 2. Soumya Venugopal {M/s. Sumukha Office Solutions, Mysuru} ಮತ್ತು 04. G Narasimha Murthy {M/s. Synergy Inc, Bengaluru} ಈ ಎರಡು ಸಂಸ್ಥೆಯವರು ಟೆಂಡರ್ ನಲ್ಲಿ ಕೋರಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸಿದ್ದರಿಂದ ಇವರ ಆರ್ಥಿಕ ಬಿಡ್‌ಅನ್ನು ಅಂಗೀಕರಿಸಿ ಈ ಎರಡು ಸಂಸ್ಥೆಗಳ ಆರ್ಥಿಕ ಬಿಡ್ ಅನ್ನು ತೆರೆಯಲು ಸರ್ವಾನುಮತದಿಂದ ಒಪ್ಪಿ ಶಿಫಾರಸ್ಸು ಮಾಡಿತ್ತು.

ಆರ್ಥಿಕ ಬಿಡ್‌ಅನ್ನು ಅಂತಿಮಗೊಳಿಸುವ ಸಂಬಂಧ ದಿನಾಂಕ: 24.03.2026 ರಂದು ನಡೆದ ಸಭೆಯಲ್ಲಿ ಆರ್ಥಿಕ ಬಿಡ್‌ಗೆ ಅರ್ಹತೆ ಹೊಂದಿದಂತಹ ಎರಡು ಸಂಸ್ಥೆಗಳಾದ,

ಕುಲಪತಿಗಳು ಕುಲಸಚಿವರು

01. M/s. Sumukha Office Solution, Mysuru, ಇವರು ಆರ್ಥಿಕ ಬಿಡ್‌ಗೆ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳ ಕ್ರಮಸಂಖ್ಯೆ 01 ರಿಂದ 101 ಕ್ಕೆ ಒಟ್ಟಾರೆ ಮೊತ್ತ ರೂ. 1,94,550.50/- (ಒಂದು ಲಕ್ಷದ ತೊಂಭತ್ತ ನಾಲ್ಕು ಸಾವಿರದ ಐದು ನೂರ ಐವತ್ತು ರೂಪಾಯಿ ಮತ್ತು ಐವತ್ತು ಪೈಸೆ ಮಾತ್ರ) ಗಳ ಮೊತ್ತ ನಮೂದಿಸಿರುತ್ತಾರೆ.

02. M/s. Synergy Inc, Bengaluru. ಇವರು ಆರ್ಥಿಕ ಬಿಡ್ ಗೆ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳ ಕ್ರಮಸಂಖ್ಯೆ 01 ರಿಂದ 101 ಕ್ಕೆ ಒಟ್ಟಾರೆ ಮೊತ್ತ ರೂ. 2,13,789/- (ಎರಡು ಲಕ್ಷದ ಹದಿಮೂರು ಸಾವಿರದ ಏಳು ನೂರ ಎಂಭತ್ತೊಂಬತ್ತು ರೂಪಾಯಿಗಳು ಮಾತ್ರ)ಗಳ ಮೊತ್ತ ನಮೂದಿಸಿರುತ್ತಾರೆ.

ಈ ಎರಡು ಸಂಸ್ಥೆಯವರು ಸಲ್ಲಿಸಿದ್ದ ಆರ್ಥಿಕ ಬಿಡ್ ದರಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಟೆಂಡರ್ ಅಧಿಸೂಚನೆಯ General Terms and conditions for eligible tenderersನ ಕ್ರಮಸಂಖ್ಯೆ-26 (Overall lowest rates will be considered for award of contract) ರ ಷರತ್ತಿನಂತೆ, ಎಲ್-1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ E-Procurement ನ K.P.P.P ಮುಖಾಂತರ ದರ ಸಂಧಾನ ಮಾಡಿ ಎಲ್-1 ದರಗಳನ್ನು ದಿನಾಂಕ: 01.04.2026 ನಡೆದ ಸಭೆಯಲ್ಲಿ Tender Evaluation Committee ಯು ಅಂತಿಮಗೊಳಿಸಿ ಶಿಫಾರಸ್ಸು ಮಾಡಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಟೆಂಡರ್ ನ ಮೌಲ್ಯಮಾಪನಾ ಸಮಿತಿಯು ಟೆಂಡರ್ ಅನ್ನು ಅಂತಿಮಗೊಳಿಸಿರುವ ಕ್ರಮಕ್ಕೆ, ಟೆಂಡರ್‌ನಲ್ಲಿ ಅರ್ಹತೆ ಪಡೆದ ಎಲ್-1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ಒಂದು ವರ್ಷದ ಮೂರು ತಿಂಗಳ ಅವಧಿಗೆ ದರಕರಾರು ಒಪ್ಪಂದ ಮಾಡಿಕೊಂಡು, ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಎಲ್-1 ದರಗಳಲ್ಲಿ ಖರೀದಿಸುವ ಸಂಬಂಧ ಅನುಮೋದನೆ ಕೋರಿ ವಿಷಯವನ್ನು ಮಂಡಿಸಿದೆ.

*****

ಶ್ರೀ. ಯತೀಶ್‌ರವರು, ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಮೂರು ಅಥವಾ ಆರು ತಿಂಗಳ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಮಾಡುವುದು ಸೂಕ್ತವೆಂದು ತಿಳಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಆ ಸಮಯದಲ್ಲಿ ಬೇಡಿಕೆ ಪ್ರಕಾರ ಖರೀದಿ ಮಾಡಬೇಕೆಂದು ಉಪಕಾರ್ಯದರ್ಶಿಗಳು, ಹಣಕಾಸು ಮತ್ತು ಉನ್ನತ ಶಿಕ್ಷಣ ಇಲಾಖೆ ರವರು ಸಭೆಗೆ ತಿಳಿಸಿದರು.

ಈ ವಿಷಯದ ಬಗ್ಗೆ 5 ವರ್ಷಗಳ ವಿವರಗಳನ್ನು ನೀಡಬೇಕೆಂದು ಉಪಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆರವರು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ದೈನಂದಿನ ಕೆಲಸ-ಕಾರ್ಯಗಳಿಗೆ ಅನುಕೂಲವಾಗುವಂತೆ ಲೇಖನ ಸಾಮಗ್ರಿಗಳನ್ನು ಖರೀದಿಸಬೇಕಾಗಿರುತ್ತದೆ. ಈ ಸಂಬಂಧ E-Procurement ನ K.P.P.P (Karnataka Public Procurement Portal) ಮುಖಾಂತರ ಟೆಂಡರ್ ಆಹ್ವಾನಿಸಿ, ಅರ್ಹರಾದವರಿಗೆ ಟೆಂಡರ್ ನೀಡಿ ವಾರ್ಷಿಕ ಅವಶ್ಯಕತೆಗೆ ಅನುಗುಣವಾಗಿ ಅರ್ಹರಾದ ಟೆಂಡರ್‌ದಾರರಿಂದ ಮೂರು ತಿಂಗಳಿಗೊಮ್ಮೆ ಲೇಖನ ಸಾಮಗ್ರಿಗಳನ್ನು ಖರೀದಿಸಲಾಗುತ್ತದೆ ಎಂದು ಸಭೆಗೆ ತಿಳಿಸಿದರು.

#####

ಕುಲಪತಿಗಳು

ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಟೆಂಡರ್‌ನಲ್ಲಿ ಅರ್ಹತೆ ಪಡೆದ ಎಲ್–1 ಬಿಡ್‌ದಾರರಾದ **M/s. Sumukha Office Solutions, Mysuru** ಇವರೊಂದಿಗೆ ಒಂದು ವರ್ಷದ ಮೂರು ತಿಂಗಳ ಅವಧಿಗೆ ದರಕರಾರು ಒಪ್ಪಂದ ಮಾಡಿಕೊಂಡು, ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಎಲ್–1 ದರಗಳಲ್ಲಿ ಖರೀದಿಸಲು ಸಭೆಯು ಅನುಮೋದಿಸಿತು.

#####

**ವಿಷಯ ಸಂಖ್ಯೆ: 185.07**

**ವಿಷಯ: 2025–26 ನೇ ಸಾಲಿನಲ್ಲಿ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ವಿತರಿಸಲು ಕೊರತೆಯಿರುವ ಹಾಗೂ 2026–27 ನೇ ಸಾಲಿನಲ್ಲಿ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ ವಿತರಿಸಲು ಅತ್ಯವಶ್ಯಕವಿರುವ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ.**

– * –

ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ ಮುದ್ರಿತ ಅಧ್ಯಯನ ಸಾಮಗ್ರಿಗಳನ್ನು ವಿತರಿಸುತ್ತಾ ಬಂದಿರುತ್ತದೆ, ಪ್ರಸ್ತುತ 2026–27ನೇ ಸಾಲಿನಲ್ಲಿ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ ವಿತರಿಸಲು ಅತ್ಯವಶ್ಯಕವಿರುವ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳಬೇಕಾಗಿರುತ್ತದೆ. 2024–25ನೇ ಸಾಲಿನಲ್ಲಿ ಕೈಗೊಂಡ ಟೆಂಡರ್ ಪ್ರಕ್ರಿಯೆ ಮೂಲಕ 2025–26ನೇ ಸಾಲಿನ ಜುಲೈ/ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಹೊಂದಿದ ಎಲ್ಲಾ NON-CBCS ನ ಹಾಗೂ CBCSನ ಎಲ್ಲಾ ಶಿಕ್ಷಣ ಕ್ರಮಗಳ ಪ್ರಥಮ/ಸೆಮಿಸ್ಟರ್‌ನ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿಕೊಂಡು ವಿತರಿಸಲಾಗಿರುತ್ತದೆ. ಸದರಿ ಸಾಲಿನಲ್ಲಿ ಪ್ರವೇಶಾತಿ ಹೊಂದಿದ CBCSನ ವಿದ್ಯಾರ್ಥಿಗಳಿಗೆ ದ್ವಿತೀಯ ಸೆಮಿಸ್ಟರ್ ಅಧ್ಯಯನ ಸಾಮಗ್ರಿಗಳನ್ನು ವಿತರಿಸಲು ಬಾಕಿಯಿರುತ್ತದೆ. ಈಗಾಗಲೇ ಡೀನ್ ಶೈಕ್ಷಣಿಕ ವಿಭಾಗದಿಂದ CBCS ಶಿಕ್ಷಣ ಕ್ರಮಗಳ ಎಲ್ಲಾ ಸೆಮಿಸ್ಟರ್‌ಗಳ ಅಧ್ಯಯನ ಸಾಮಗ್ರಿಗಳ HARD COPY & SOFT COPYಗಳು ಹಂತಹಂತವಾಗಿ ಅಧ್ಯಯನ ಸಾಮಗ್ರಿ ವಿಭಾಗಕ್ಕೆ ಸಲ್ಲಿಕೆಯಾಗಿರುತ್ತವೆ (ಕೆಲವು ಅಧ್ಯಯನ ವಿಭಾಗಗಳು ಹೊರತು ಪಡಿಸಿ).

ಪ್ರಸ್ತುತ 2026–27ನೇ ಸಾಲಿನಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ NON CBCS ನ ಪ್ರಥಮ, ದ್ವಿತೀಯ, ತೃತೀಯ ಬಿ.ಎ ಬಿ.ಕಾಂ. ಬಿ.ಇಡಿ ಹಾಗೂ **CBCS ನ ಸ್ನಾತಕ ಮತ್ತು ಸ್ನಾತಕೊತ್ತರ ಎಲ್ಲಾ ಸೆಮಿಸ್ಟರ್‌ಗಳ ಅಧ್ಯಯನ ಸಾಮಗ್ರಿಗಳನ್ನು ಹಾಗೂ ಹಿಂದಿನ ಸಾಲಿನಲ್ಲಿ ವಿತರಿಸಲು ಬಾಕಿಯಿರುವ CBCS ನ ದ್ವಿತೀಯ ಸೆಮಿಸ್ಟರ್ ಅಧ್ಯಯನ ಸಾಮಗ್ರಿಗಳನ್ನು** ಮುದ್ರಿಸಲು ಅವಶ್ಯವಿರುವ ಅಂದಾಜು ಪ್ರತಿಗಳನ್ನು ಕಳೆದ ಮೂರು ಆವೃತ್ತಿಗಳು ಪ್ರವೇಶಾತಿ ಸರಾಸರಿ ಆಧಾರದ ಮೇಲೆ ಸಂಖ್ಯೆ ನಿರ್ಧರಿಸಿ ಮುದ್ರಣಕ್ಕೆ ತಗಲುವ ಅಂದಾಜು ವೆಚ್ಚವನ್ನು 2024–25ನೇ ಸಾಲಿನ ಟೆಂಡರ್ ದರಗಳಂತೆ ಲೆಕ್ಕಹಾಕಿ, ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ (ಪ್ರತ್ಯೇಕವಾಗಿ ಅನುಬಂಧ 1 ರಿಂದ 6ರಲ್ಲಿ ಮಾಹಿತಿಗಾಗಿ ಲಗತ್ತಿಸಿದೆ). ಅದರಂತೆ ಅತ್ಯವಶ್ಯಕವಿರುವ ಹಾಗೂ ಕೊರತೆಯಿರುವ ಅಧ್ಯಯನ ಸಾಮಗ್ರಿಗಳ ಮುದ್ರಣದ ಅಂದಾಜು ವೆಚ್ಚ ರೂ. 43.00 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿರುತ್ತದೆ.

ಅನುಬಂಧಗಳಲ್ಲಿ ಪ್ರತ್ಯೇಕವಾಗಿ ನಮೂದಿಸಿರುವ NON-CBCS ನ ಹಾಗೂ CBCS ನ ಅಧ್ಯಯನ ಸಾಮಗ್ರಿಗಳನ್ನು ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಮುದ್ರಿಸಿಕೊಳ್ಳಲು ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದರ ನಿಗದಿಪಡಿಸಿಕೊಳ್ಳುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ನಿರ್ದೇಶನ ಕೋರಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

ಕುಲಪತಿಗಳು　　　　ಕುಲಸಚಿವರು

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಡಿಗ್ರಿ ಕಾರ್ಯಕ್ರಮಗಳನ್ನು ಸೆಮಿಸ್ಟರ್ ರೀತಿ ಮಾಡಿದ ನಂತರ ಮುಂದಿನ ಕ್ರಮ ವಹಿಸಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ನಾವು ಪ್ರವೇಶಾತಿ ಸಂದರ್ಭದಲ್ಲಿ ಸಿದ್ಧಪಾಠಗಳನ್ನು ನೀಡುತ್ತಿರುವುದಿಲ್ಲ ಎಂದು ಕಂಪ್ಲೇಂಟ್‌ಗಳು ಬಂದಿರುತ್ತದೆ. ಇದರಿಂದ ಸಿದ್ಧಪಾಠಗಳನ್ನು ಮುದ್ರಣ ಮಾಡಬೇಕೆಂದು ತಿಳಿಸಿದರು.

ಉಪ ಕಾರ್ಯದರ್ಶಿಗಳು, ಹಣಕಾಸು ಇಲಾಖೆರವರು ಮಾತನಾಡಿ ಯಾವ ಸಾಲಿನವರೆಗೂ ಪ್ರವೇಶಾತಿ ಪಡೆದವರಿಗೆ ಸಿದ್ಧಪಾಠಗಳನ್ನು ನೀಡಲಾಗಿದೆ ಎಂದು ವಿವರಣೆ ಕೇಳಿದರು.

ಮುಂದುವರೆದು, ಸರ್ಕಾರಿ ಮುದ್ರಣ ಇಲಾಖೆಗೆ ಮುಖಾಂತರ ನಮ್ಮ ವಿಶ್ವವಿದ್ಯಾನಿಲಯದ ಸಿದ್ಧಪಾಠಗಳ ಮುದ್ರಣದ ಪೇಪರ್ ಗುಣಮಟ್ಟದ ದರಗಳ ಬಗ್ಗೆ ದರಪಟ್ಟಿಯನ್ನು ಪಡೆಯಬೇಕು. ಅಷ್ಟೇ ಅಲ್ಲದೆ ಅವರಿಂದ ಮಾಹಿತಿ ಪಡೆಯುವುದು. ಆನ್‌ಲೈನ್ ಮುಖಾಂತರ ಎಷ್ಟು ವಿದ್ಯಾರ್ಥಿಗಳು ಸಿದ್ಧಪಾಠಗಳನ್ನು ಕೇಳಿರುತ್ತಾರೆ ಅಂತಹವರುಗಳಿಗೆ ಅವಕಾಶ ಕಲ್ಪಿಸಬಹುದೆಂದು ತಿಳಿಸಿದರು.

ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಮಂಡಿಸುವ ವಿಷಯಗಳ ಪೂರ್ಣ ವಿವರಗಳನ್ನು ವಿಷಯದಲ್ಲಿ ಪೂರ್ಣ ಮಾಹಿತಿ ಅಥವಾ ಅನುಬಂಧಗಳನ್ನು ಲಗತ್ತಿಸಿ ವಿಷಯಗಳನ್ನು ಮಂಡಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿಶ್ವವಿದ್ಯಾನಿಲಯದ ಸಿದ್ಧಪಾಠಗಳ ಮುದ್ರಣ ಸಂಬಂಧ ಟೆಂಡರ್‌ನಲ್ಲಿ ಎಸ್.ಎಲ್.ಎಂ ಯಾರು ಸಪ್ಲೈ ಮಾಡಿರುತ್ತಾರೆ ಅವರುಗಳಿಗೆ ಮಾತ್ರ ಅಪ್ಲೈ ಮಾಡುವುದಕ್ಕೆ ಅವಕಾಶ ಇರುವುದರಿಂದ ಕಡಿಮೆ ಜನರು ಟೆಂಡರ್‌ನಲ್ಲಿ ಭಾಗವಹಿಸುತ್ತಾರೆ. ಸಿದ್ಧಪಾಠಗಳು ನಿಗಧಿತ ಸಮಯದಲ್ಲಿ ಸಿದ್ಧಪಡಿಸಲು ಸಾಧ್ಯವಾಗುತ್ತಿರುವುದಿಲ್ಲ. ಈ ಕಂಡೀಶನ್ ತೆಗೆದು ಹಾಕಿದರೆ ಹೆಚ್ಚಿನ ಜನರು ಟೆಂಡರ್‌ನಲ್ಲಿ ಭಾಗವಹಿಸುತ್ತಾರೆ ಎಂದು ಸದಸ್ಯರುಗಳು ಸಭೆಯಲ್ಲಿ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗನುಸಾರವಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಎಲ್ಲಾ ಸೆಮಿಸ್ಟರ್‌ಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಬೇಕು. ಅನಾವಶ್ಯಕವಾಗಿ ಹೆಚ್ಚಿನ ಸಿದ್ಧಪಾಠಗಳನ್ನು ಮುದ್ರಿಸಬಾರದು,ಅವಶ್ಯಕತೆಗನುಗುಣವಾಗಿ ಮಾತ್ರಸಿದ್ಧಪಾಠಗಳನ್ನು ಮುದ್ರಿಸಲು ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 185.08**

**ವಿಷಯ: ಹಣಕಾಸು ಸಮಿತಿಯ 93ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ**

– * –

ದಿನಾಂಕ: 07/03/2026 ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 93ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 185ನೇ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

*****

**ಹಣಕಾಸು ಸಮಿತಿ ವಿಷಯ ಸಂಖ್ಯೆ: 93.02ಕ್ಕೆ ಸಂಬಂಧಪಟ್ಟಂತೆ:–**

ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಫಂಡ್‌ಗಳನ್ನು ಬೇರೆ ಬೇರೆ ಬ್ಯಾಂಕಿನಲ್ಲಿ ಇಡುವ ಬದಲು ಒಂದೇ ನ್ಯಾಷಿನಲ್ ಬ್ಯಾಂಕಿನಲ್ಲಿ ಇಡಬೇಕು. Maltipurpose Fund Accounts ಗಳನ್ನು Review ಮಾಡಿಕೊಳ್ಳಬೇಕೆಂದು ತಿಳಿಸಿದರು.

**ಕುಲಪತಿಗಳು**

**ಕುಲಸಚಿವರು**

ಹಣಕಾಸು ಸಮಿತಿ ವಿಷಯ ಸಂಖ್ಯೆ: **93.06**ಕ್ಕೆ ಸಂಬಂಧಪಟ್ಟಂತೆ:-

ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ **Digital Marketing** ಸೇವೆಯನ್ನು ನೀಡುತ್ತಿರುವ **M/S NPU Solution & Services LLP.** ಬೆಂಗಳೂರುರವರಿಗೆ ಏತಕ್ಕೆ 3 ವರ್ಷಗಳಿಗೆ ಏತಕ್ಕೆ ನೀಡುತ್ತಿದ್ದೀರಿ ಎಂದು ಕೇಳಿದರು. ಇವುಗಳನ್ನು ಆಡಿಟ್ ಮಾಡಿಸಿ, **Outcome report** ಗಳನ್ನು ಸಹ ಸಭೆಗೆ ಮಂಡಿಸಬೇಕು ಎಂದು ತಿಳಿಸಿದರು.

ತೀರ್ಮಾನ:

ಸದರಿ ವಿಷಯದ ಕೂಲಂಕುಷವಾಗಿ ಚರ್ಚಿಸಲು ಮುಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಪೂರಕ ದಾಖಲೆಗಳೊಂದಿಗೆ ವಿಷಯ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಹಣಕಾಸು ಸಮಿತಿ ವಿಷಯ ಸಂಖ್ಯೆ: **93.07** ಹಾಗೂ **93.08**ಕ್ಕೆ ಸಂಬಂಧಪಟ್ಟಂತೆ:-

ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ, ಸರ್ಕಾರದಲ್ಲಿ QCBS ಏತಕ್ಕೆ ಮಾಡಿರುತ್ತಾರೆ. ಸರ್ಕಾರದ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ಕಾರ್ಯನಿರ್ವಹಿಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, KPPP ರ ನಿಯಮಾವಳಿಯಂತೆ 'ಇ' ಪ್ರೊಕ್ಯೂರ್ಮೆಂಟ್ ಪೋರ್ಟಲ್ ಅನ್ನು KC-4 ರಂತೆ Quality Cost Based Selection ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಬಿಡ್ ಹಾಗೂ ವಿತ್ತೀಯ ಬಿಡ್‌ನ ಅರ್ಹತೆ ಹೊಂದಿರುವವರಿಗೆ ನೀಡಬೇಕಾಗಿರುತ್ತದೆ. ಇವುಗಳನ್ನು ಈಗಾಗಲೇ ಹಣಕಾಸು ಸಮಿತಿ ಸದಸ್ಯರುಗಳು ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಿರುವ ಬಗ್ಗೆ ಸದಸ್ಯರ ಗಮನಕ್ಕೆ ತಂದರು.

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯ ಸಂಖ್ಯೆ: **93.07** ಮತ್ತು **93.08**ಕ್ಕೆ ಸಂಬಂಧಪಟ್ಟಂತೆ ಸರ್ಕಾರದ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ತಾಂತ್ರಿಕ ಬಿಡ್ ಮತ್ತು ವಿತ್ತೀಯ ಬಿಡ್‌ಗಳ ಪ್ರಕಾರ ಯಾರು ಅರ್ಹರಾಗಿರುತ್ತಾರೆ ಅವರುಗಳಿಗೆ ಮಾತ್ರ ನೀಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.
2) **93**ನೇ ಹಣಕಾಸು ಸಮಿತಿಯ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು.

#####

ವಿಷಯ ಸಂಖ್ಯೆ: **185.09**

ವಿಷಯ: ಶ್ರೀಮತಿ ಲಕ್ಷ್ಮೀ. ಟಿ.ಎಸ್ **W/o** ಲೇಟ್ ಸಿ.ಪಿ ಶಿವಕುಮಾರ್ ಇವರು ಅನುಕಂಪದ ಆಧಾರದ ಮೇಲೆ ತಮ್ಮ ಮಗನಿಗೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಪತ್ರದ ಬಗೆಗೆ.

– * –

ಶ್ರೀಮತಿ ಲಕ್ಷ್ಮೀ ಟಿ.ಎಸ್ w/o ಲೇಟ್ ಸಿ.ಪಿ ಶಿವಕುಮಾರ್ ಇವರು ದಿನಾಂಕ: 07.11.2024 ರಂದು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಿ I humble request you to give the suitable job to my son mahit on C.G ground, as I am aged, and have health issues. I will not be able to make up. I have full consent to give the job to my son. Mahit looking forward for the positive reply. Hope you will do the needful ಎಂದು ಪತ್ರದಲ್ಲಿ ಮನವಿ ಮಾಡಿಕೊಂಡಿರುತ್ತಾರೆ.

ಕುಲಪತಿಗಳು ಕುಲಸಚಿವರು

ಶ್ರೀ ಮಹಿತ ಕೋಂ ಲೇಟ್ ಸಿ.ಪಿ ಶಿವಕುಮಾರ್, ಇವರು ನನ್ನ ತಂದೆಯವರಾದ ಶ್ರೀ ಸಿ.ಪಿ ಶಿವಕುಮಾರ್ ರವರು ದಿನಾಂಕ: 02.12.2023 ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಉಪಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು/ನನ್ನ ತಂದೆ ಮರಣ ಹೊಂದಿರುವುದರಿಂದ ಅನುಕಂಪದ ಆಧಾರದ ಮೇಲೆ ಇವರ ಮಗನಾದ ಶ್ರೀ ಮಹಿತ ಆದ ನನಗೆ ಉದ್ಯೋಗ ನೀಡಬೇಕೆಂದು ಮನವಿ ಪತ್ರದೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. (1) ವಂಶವೃಕ್ಷದ ದೃಢೀಕರಣ ಪತ್ರ, (2) ಪಿ.ಯು.ಸಿ ಅಂಕಪಟ್ಟಿ, (3) ಎಸ್.ಎಸ್.ಎಲ್.ಸಿ ಅಂಕಪಟ್ಟಿ,(4) ದಿ. ಸಿ.ಪಿ ಶಿವಕುಮಾರ್ ಮರಣ ಸಮರ್ಥನಾ ಪತ್ರ, (5) ಆಧಾರ್ ಕಾರ್ಡ್ ನ ಛಾಯಾ ಪ್ರತಿ, (6) ಚುನಾವಣಾ ಗುರುತಿನ ಚೀಟಿ, (7) ಆದಾಯ ದೃಢೀಕರಣ ಪತ್ರ, (8) ರೇಷನ್ ಕಾರ್ಡ್ ಛಾಯಾ ಪ್ರತಿ, (9) ಪಾನ್ ಕಾರ್ಡ್ ಛಾಯಾ ಪ್ರತಿ, (10) ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ, (11) ವರ್ಗಾವಣೆ ಪತ್ರದ ಛಾಯಾ ಪ್ರತಿ, (12) ಅಧಿಕೃತ ಪ್ರತಿ ಲೇಖನ (Official Transcript), ಬಿ.ಬಿ.ಎ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ನೀಡಿರುವುದಿಲ್ಲ ಎಂಬ ಅಂಶಗಳನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಮುಂದುವರೆದಂತೆ, ಸದರಿಯವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಂಶವೃಕ್ಷ ದೃಢೀಕರಣ ಪತ್ರ ಹಾಗೂ ರೇಷನ್ ಕಾರ್ಡ್ ಛಾಯಾ ಪ್ರತಿಯಲ್ಲಿ ತಂದೆಯ ಹೆಸರು C.P Shivakumar ಹಾಗೂ ತಾಯಿಯ ಹೆಸರು Lakshmi T.S ಎಂದು ನಮೂದಾಗಿರುತ್ತದೆ. ಆದರೆ ಎಸ್.ಎಸ್.ಎಲ್.ಸಿ & ಪಿ.ಯು.ಸಿ ಅಂಕಪಟ್ಟಿಯ ಛಾಯಾ ಪ್ರತಿಯಲ್ಲಿ ತಂದೆಯ ಹೆಸರು Pradeep S. Halageri ಹಾಗೂ ತಾಯಿಯ ಹೆಸರು Lakshmi T.S ಎಂದು ನಮೂದಾಗಿರುತ್ತದೆ. ಆಧಾರ್ ಕಾರ್ಡ್, ಆದಾಯ ದೃಢೀಕರಣ ಪತ್ರ, ವರ್ಗಾವಣೆ ಪತ್ರ, ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರಗಳ ಛಾಯಾ ಪ್ರತಿಯಲ್ಲಿ ತಂದೆಯ ಹೆಸರು Pradeep S. Halageri ಹಾಗೂ ತಾಯಿಯ ಹೆಸರು Lakshmi T.S ಎಂದು ನಮೂದಾಗಿರುತ್ತದೆ. ಹಾಗೂ ಪಾನ್ ಕಾರ್ಡ್‌ನ ಛಾಯಾ ಪ್ರತಿಯಲ್ಲಿ ತಂದೆಯ ಹೆಸರು Pradeep Subbarao Halageri ಎಂದು ನಮೂದಾಗಿರುತ್ತದೆ.

ಮೃತ ನೌಕರರ ಎರಡನೇ ಪತ್ನಿಯಾದ ಶ್ರೀಮತಿ ಲಕ್ಷ್ಮೀ ಟಿ.ಎಸ್ ರವರು ಆರ್ಥಿಕ ಸೌಲಭ್ಯ ಪಡೆಯುವ ಸಂಬಂಧ ಮನವಿ ಪತ್ರದೊಂದಿಗೆ ಶ್ರೀಮತಿ ಕೋಮಲ ಎಂಬುವವರಿಂದ ದಿನಾಂಕ: 28.09.2010 ರಂದು ವಿಚ್ಛೇದನೆ ಪಡೆದಿರುತ್ತಾರೆ ಎಂಬ Family Court Decree copy ನೀಡಿರುತ್ತಾರೆ. ಶ್ರೀಮತಿ ಲಕ್ಷ್ಮೀ ಟಿ.ಎಸ್ ಇವರು ಸಿ.ಪಿ ಶಿವಕುಮಾರ್ ರವರೊಂದಿಗೆ ವಿವಾಹ ಮಹೋತ್ಸವ ಲಗ್ನ ಕುಂಡಲಿ ಪ್ರತಿ ನೀಡಿರುತ್ತಾರೆ. ಸದರಿಯವರೊಂದಿಗೆ ಮರು ವಿವಾಹವಾದ ಯಾವುದೇ ಅಧಿಕೃತ ದಾಖಲೆಗಳನ್ನು ನೀಡಿರುವುದಿಲ್ಲ. ಸದರಿ ದಿವಂಗತರ ಸೇವಾ ಪುಸ್ತಕದಲ್ಲಿ ನಮೂನೆ-2, ಮರಣ ಹಾಗೂ ನಿವೃತ್ತಿ, ಉಪದಾನದ ನಾಮನಿರ್ದೇಶನದ ಅರ್ಜಿಯಲ್ಲಿ ಶ್ರೀಮತಿ ಲಕ್ಷ್ಮೀ ಟಿ.ಎಸ್(ಹೆಂಡತಿ) ಮತ್ತು ಮಹಿತ್ ಎಸ್. (ಮಗ) ರವರ ಹೆಸರು ನಮೂದಿಸಿರುತ್ತಾರೆ.

ಸದರಿಯವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯದಲ್ಲಿ ಉಪಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದ ದಿವಂಗತ ಶ್ರೀ ಸಿ.ಪಿ ಶಿವಕುಮಾರ್ ಇವರ ಹೆಸರು ವಂಶವೃಕ್ಷ ದೃಢೀಕರಣ ಪತ್ರ ಹಾಗೂ ರೇಷನ್ ಕಾರ್ಡ್‌ನ ತಂದೆಯ ಹೆಸರು ಕಾಲಂನಲ್ಲಿ ಮಾತ್ರ ನಮೂದಾಗಿದ್ದು ಉಳಿದಂತೆ ಎಸ್.ಎಸ್.ಎಲ್.ಸಿ & ಪಿ.ಯು.ಸಿ ಅಂಕಪಟ್ಟಿ, ಆಧಾರ್ ಕಾರ್ಡ್, ಆದಾಯ ದೃಢೀಕರಣ ಪತ್ರ, ವರ್ಗಾವಣೆ ಪತ್ರ, ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ ಹಾಗೂ ಪಾನ್ ಕಾರ್ಡ್‌ನ ಛಾಯಾ ಪ್ರತಿಯಲ್ಲಿ ತಂದೆಯ ಹೆಸರು ಕಾಲಂ ನಲ್ಲಿ ಪ್ರದೀಪ್. ಎಸ್ ಹಲಗೇರಿ ಎಂದು ನಮೂದಾಗಿರುತ್ತದೆ.

ಸದರಿ ವಿಚಾರವಾಗಿ ಕಾನೂನು ತಜ್ಞರ ಅಭಿಪ್ರಾಯ/ಸ್ಪಷ್ಟೀಕರಣಕ್ಕಾಗಿ ಸದರಿಯವರು ಸಲ್ಲಿಸಿರುವ ದಾಖಲಾತಿಗಳೊಂದಿಗೆ ದಿನಾಂಕ: 26.12.2024 ರಂದು ಕಾನೂನು ತಜ್ಞರಿಗೆ ಸಲ್ಲಿಸಲಾಗಿರುತ್ತದೆ. ಸದರಿ ವಿಚಾರವಾಗಿ ಕಾನೂನು ತಜ್ಞರಾದ ಶ್ರೀ ಮಹದೇವ ಪ್ರಸಾದ್, ವಕೀಲರು/ಕಾನೂನು ತಜ್ಞರು ಈ ಕೆಳಕಂಡಂತೆ ಅಭಿಪ್ರಾಯ/ಸ್ಪಷ್ಟೀಕರಣ ನೀಡಿರುತ್ತಾರೆ.

ಕುಲಪತಿಗಳು

ಕುಲಸಚಿವರು

**OPINION:**

"In view of the above facts and the documents produced for verification, it is my considered legal opinion that Mr. Mahit.P. Halageri, being the legal heir of Late Sri. C.P Shivakumar(Deputy Registar) and having obtained a Succession Certificate from the competent Court, is legally entitled to be considered for appointment on compassionate grounds in Karnataka State Open University, Mysuru, subject to fulfillment of the eligibility criteria, service rules and other conditions governing compassionate appointments.

Hence, there is no legal objection for the University authorities to process and consider the claim of Mr. Mahit.P. Halageri, for appointment on compassionate grounds, in accordance with the applicable rules and regulations.

This opinion is rendered based on the documents produced and is issued for the purpose of consideration by the competent authority of the University" ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀಮತಿ ಲಕ್ಷ್ಮೀ ಟಿ.ಎಸ್ w/o ಲೇಟ್ ಸಿ.ಪಿ ಶಿವಕುಮಾರ್ ರವರ ಮಗನಾದ ಶ್ರೀ ಮಹಿತ ಕೋಂ ಲೇಟ್ ಸಿ.ಪಿ ಶಿವಕುಮಾರ್ ರವರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ವಿಚಾರವಾಗಿ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿದ್ದು, ಸದರಿ ವ್ಯಾಜ್ಯವು ಅವರಂತೆ ಆಗಿದ್ದು, ಈ ಸಂಬಂಧ, ಶ್ರೀ ಮಹದೇವ ಪ್ರಸಾದ್, ವಕೀಲರು/ಕಾನೂನು ತಜ್ಞರು ಈ ಕೆಳಕಂಡಂತೆ ಅಭಿಪ್ರಾಯ/ಸ್ಪಷ್ಟೀಕರಣ ನೀಡಿರುತ್ತಾರೆ. – "In view of the above facts and the documents produced for verification, it is my considered legal opinion that Mr. Mahit.P. Halageri, being the legal heir of Late Sri. C.P Shivakumar (Deputy Registar) and having obtained a Succession Certificate from the competent Court, is legally entitled to be considered for appointment on compassionate grounds in Karnataka State Open University, Mysuru, subject to fulfillment of the eligibility criteria, service rules and other conditions governing compassionate appointments.

Hence, there is no legal objection for the University authorities to process and consider the claim of Mr. Mahit.P. Halageri, for appointment on compassionate grounds, in accordance with the applicable rules and regulations.

This opinion is rendered based on the documents produced and is issued for the purpose of consideration by the competent authority of the University" ಎಂದಿರುತ್ತದೆಂದು ಸಭೆಗೆ ತಿಳಿಸಿದರು.

ಸೇವಾ ನಿಯಮಗಳ ಪ್ರಕಾರ ವಿವರಗಳನ್ನು ನೀಡತಕ್ಕದ್ದು, ಇವರಿಗೆ ಇಬ್ಬರು **ಹೆಂಡತಿಯರಿದ್ದರೆಂದು ನಮೂದಾಗಿದ್ದು,** ಈ ಬಗ್ಗೆ ಪೂರ್ಣ ರೆಕಾರ್ಡ್‌ಗಳನ್ನು ಪರಿಶೀಲಿಸಿ ಮುಂದಿನ ಕ್ರಮವಹಿಸಬೇಕಾಗಿರುತ್ತದೆ ಎಂದು ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆಯವರು ಸಭೆಗೆ ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀಮತಿ ಲಕ್ಷ್ಮೀ. ಟಿ.ಎಸ್ W/o ಲೇಟ್ ಸಿ.ಪಿ ಶಿವಕುಮಾರ್ ಇವರು ಅನುಕಂಪದ ಆಧಾರದ ಮೇಲೆ ತಮ್ಮ ಮಗನಿಗೆ ಶ್ರೀ ಮಹಿತ ಕೋಂ ಲೇಟ್ ಸಿ.ಪಿ ಶಿವಕುಮಾರ್ ಇವರಿಗೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಉದ್ಯೋಗಿಯಾಗಿದ್ದ ಲೇಟ್ ಸಿ.ಪಿ ಶಿವಕುಮಾರ್ ರವರು ಉಪಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸದರಿಯವರಿಗೆ ನ್ಯಾಯಾಲಯದ ತೀರ್ಮಾನದ ಅನುಸಾರ ಹಾಗೂ ವಿಶ್ವವಿದ್ಯಾನಿಲಯದ ಕಾನೂನು ತಜ್ಞರ ಅಭಿಪ್ರಾಯಗಳ ಪ್ರಕಾರ ಕರಾಮುವಿ ಪರಿನಿಯಮಗಳ ಅನ್ವಯ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಗೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ವಿಷಯ ಸಂಖ್ಯೆ: 185.10**

ವಿಷಯ: ಶ್ರೀ. ಕೃಷ್ಣರಾಜು ಎಂ, ದ್ವಿದಗು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಹಾಗೂ ಮಾಹಿತಿ ವಿಭಾಗ, ಇವರ ಪತ್ನಿಯು ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ವೈದ್ಯಕೀಯ ವೆಚ್ಚದ ಹುಂಡಿಯ ಮೊತ್ತವನ್ನು ಮರುಭರಿಸುವಂತೆ ಕೋರಿರುವ ಬಗ್ಗೆ.

– * –

ಶ್ರೀ. ಕೃಷ್ಣರಾಜು ಎಂ, ದ್ವಿದಗು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಹಾಗೂ ಮಾಹಿತಿ ವಿಭಾಗ, ಇವರು ತಮ್ಮ ಪತ್ನಿಯಾದ ಶ್ರೀಮತಿ. ಶ್ವೇತಾ ಕೆ ಎಸ್, ಇವರಿಗೆ ತುರ್ತು ಚಿಕಿತ್ಸೆಯ ನಿಮಿತ್ತ ಖಾಸಗಿ ಆಸ್ಪತ್ರೆಯಾದ ಹೆಲ್ತ್ ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಎಲ್.ಟಿ.ಡಿ, ಹೆಚ್.ಸಿ.ಜಿ, ಟವರ್ # 8, ಪಿ ಕಾಳಿಂಗ ರಾವ್ ರೋಡ್ ಸಂಪಂಗಿ ರಾಮ್ ನಗರ, ಬೆಂಗಳೂರು ಇಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದು ವೈದ್ಯಕೀಯ ವೆಚ್ಚದ ಹುಂಡಿಗಳ ಮೊತ್ತ ರೂ. 3,52,922/–ಗಳನ್ನು ಮರುಭರಿಕೆ ಮಾಡಿಕೊಡಲು ಕೋರಿ ದಿನಾಂಕ: 13/12/2024 ರಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿಯವರ ವೈದ್ಯಕೀಯ ಮರುಭರಿಕೆಯ ಹುಂಡಿಯನ್ನು KMAR ನಿಯಮ 1963 ಮತ್ತು CGHS ಬೆಂಗಳೂರು–2014ರ ದರಗಳನ್ವಯ ಪರಿಶೀಲಿಸಲಾಗಿ, ಸದರಿಯವರು ಚಿಕಿತ್ಸೆ ಪಡೆದಿರುವ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಯಾಗಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 48 ಎಸ್‌ಎಂಆರ್ 2018(ಭಾ), ಬೆಂಗಳೂರು, ದಿನಾಂಕ: 13/09/2019ರ ಆದೇಶದಂತೆ ದಿನಾಂಕ: 06/05/2025ರ ಪತ್ರದಲ್ಲಿ ಸದರಿಯವರ ವೈದ್ಯಕೀಯ ಹುಂಡಿಯನ್ನು ಪರಿಶೀಲಿಸಿ ಮರುಪಾವತಿಸಬಹುದಾದ ಅರ್ಹತಾದಾಯಕ ಮೊತ್ತದ ಮಾಹಿತಿಯನ್ನು ಒದಗಿಸಲು ಕೋರಿ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಶಾಂತಿನಗರ, ಬೆಂಗಳೂರು–27 ಇವರಿಗೆ ಪತ್ರ ಬರೆಯಲಾಗಿತ್ತು. ಈ ಸಂಬಂಧ, ಸದರಿ ಸಂಸ್ಥೆಯವರು ದಿನಾಂಕ: 10/06/2025 ರಂದು ವಿಶ್ವವಿದ್ಯಾನಿಲಯಕ್ಕೆ ಬರೆದಿರುವ ಪತ್ರದಲ್ಲಿ ಸ್ವಾಯತ್ತ ಸಂಸ್ಥೆ/ಮಂಡಳಿ/ನಿಗಮ/ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳ ಪ್ರಾಸ್ತಾವನೆಗಳನ್ನು ಪರೀಶಿಲಿಸುವ ಅಧಿಕಾರ ಪ್ರತ್ಯಾಯೋಜನೆ ಇರುವುದಿಲ್ಲ ಹಾಗೂ ಇಂತಹ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಆಡಳಿತ ಇಲಾಖೆಗಳೇ ಪರಿಶೀಲಿಸಿ ಕ್ರಮವಹಿಸಬೇಕಾಗಿರುತ್ತದೆ ಎಂದು ತಿಳಿಸಿ ಸಂಪೂರ್ಣ ಪ್ರಸ್ತಾವನೆಯನ್ನು ಹಿಂತಿರುಗಿಸಿರುತ್ತಾರೆ (ಅನುಬಂಧ–01).

ಈ ಹಿನ್ನಲೆಯಲ್ಲಿ, ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು–23 ಇವರ ಸಲಹೆಯಂತೆ ಕ್ರಮ ಜರುಗಿಸಿದಲ್ಲಿ, KMAR ನಿಯಮ 1963 ಮತ್ತು CGHS ಬೆಂಗಳೂರು–2014ರ ದರಗಳನ್ವಯ ಮರುಭರಿಕೆಗೆ ಅರ್ಹವಾದ ಮೊತ್ತ ರೂ. 1,05,779/–ಗಳಾಗಿರುತ್ತವೆ.

ಕುಲಪತಿಗಳು

ಕುಲಸಚಿವರು

ವಿಶ್ವವಿದ್ಯಾನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. ಒಂದು ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು ಒಂದು ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ (ಅನುಬಂಧ-02).

ಮೇಲಿನ ಎಲ್ಲಾ ಅಂಶಗಳು ಹಾಗೂ ಕರಾಮುವಿಯ ಪರಿನಿಯಮ ಮತ್ತು ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು-23 ಇವರ ಸಲಹೆಯನ್ನು ಸಭೆಯ ಅವಗಾಹನೆಗೆ ತರುತ್ತಾ, ಶ್ರೀ. ಕೃಷ್ಣರಾಜು ಎಂ, ದ್ವಿದಗು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಹಾಗೂ ಮಾಹಿತಿ ವಿಭಾಗ, ಇವರ ಪತ್ನಿಯಾದ ಶ್ರೀಮತಿ. ಶ್ವೇತಾ ಕೆ ಎಸ್, ಇವರು ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುವ ವೈದ್ಯಕೀಯ ವೆಚ್ಚದ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ವಿಷಯವನ್ನು ಮಂಡಿಸಿದೆ.

*****

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ಕೃಷ್ಣರಾಜು ಎಂ, ದ್ವಿದಗು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಹಾಗೂ ಮಾಹಿತಿ ವಿಭಾಗ, ಇವರು ತಮ್ಮ ಪತ್ನಿಯಾದ ಶ್ರೀಮತಿ. ಶ್ವೇತಾ ಕೆ ಎಸ್, ಇವರಿಗೆ ತುರ್ತು ಚಿಕಿತ್ಸೆಯ ನಿಮಿತ್ತ ಖಾಸಗಿ ಆಸ್ಪತ್ರೆಯಾದ ಹೆಲ್ತ್ ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್, ಬೆಂಗಳೂರು. ಇಲ್ಲಿ ಚಿಕಿತ್ಸೆಯನ್ನು ಪಡೆದಿದ್ದು, ಇದು ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಯಾಗಿರುವುದರಿಂದ ಸದರಿ ವೈದ್ಯಕೀಯ ವೆಚ್ಚಕ್ಕೆ ಸಂಬಂಧಪಟ್ಟಂತೆ ಪೂರ್ಣ ವಿವರಗಳನ್ನು ಸರ್ಕಾರಕ್ಕೆ ಕಳುಹಿಸುವುದು. ಸುಪ್ರಿಂಕೋರ್ಟ್ ಆದೇಶದ ಪ್ರಕಾರ ಇಂತಹ ವಿಷಯಗಳನ್ನು ಸರ್ಕಾರಕ್ಕೆ ಕಳುಹಿಸಿ, ಸರ್ಕಾರದ ತೀರ್ಮಾನವನ್ನು ಅನುಸರಿಸಿ ಮುಂದಿನ ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 185.11**

**ವಿಷಯ: ಕರಾಮುವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮನವಿಯಮೇರೆಗೆ ದಿನಾಂಕ:12-02-2026ರಂದುನಡೆದಂತಹ "ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಸಮಿತಿ"ಸಭೆಯ ನಡಾವಳಿಯನ್ನು ವ್ಯವಸ್ಥಾಪನ ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಾಪಕರು ಮತ್ತು ಅಧ್ಯಾಪಕೇತರ ವರ್ಗದ ಮನವಿಯ ಮೇರೆಗೆ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ವಿ.ವಿ.ಯ ಆಡಳಿತ ಕಛೇರಿಯ ಮುಂಭಾಗ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ **"ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಸಮಿತಿ"**ಯನ್ನು ರಚಿಸಿಲಾಗಿದ್ದು; ಪುತ್ಥಳಿ ಪ್ರತಿಷ್ಠಾಪಿಸುವ ಸಂಬಂಧ ಚರ್ಚಿಸಲು ಮತ್ತು ಸಲಹೆಗಳನ್ನು ನೀಡಲು ದಿನಾಂಕ: 12-02-2026 ರಂದು ಗುರುವಾರ ಮಧ್ಯಾಹ್ನ 3.00 ಕ್ಕೆ ಸಮಿತಿಯ ಸಭೆಯನ್ನು ಮಾನ್ಯ ಕುಲಸಚಿವರ ಕೊಠಡಿಯಲ್ಲಿ ನಡೆಸಲಾಯಿತು. **"ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಸಮಿತಿ"** ಸಭೆಯ ನಡಾವಳಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

ಈ ಸಂಬಂಧ ದಿನಾಂಕ: 12-02-2026 ರಂದು ಜರುಗಿದ **"ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಸಮಿತಿ"** ಸಭೆಯ ನಡಾವಳಿಯನ್ನು ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯುವ ಸಂಬಂಧ ವಿಷಯವನ್ನು ಮಂಡಿಸಿದೆ.

*****

ಕುಲಪತಿಗಳು ಕುಲಸಚಿವರು

"ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ" ನಿರ್ಮಾಣ ಮಾಡುವುದರಿಂದ ಯಾವುದೇ ತೊಂದರೆಗಳಿರುವುದಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಪಡೆದು ಮುಂದಿನ ಕ್ರಮವಹಿಸಬೇಕಾಗಿರುತ್ತದೆಂದು ಸಭೆಯಲ್ಲಿ ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ ರವರು ಸಭೆಗೆ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 12-02-2026 ರಂದು ಜರುಗಿದ "ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಸಮಿತಿ" ಸಭೆಯ ನಡವಳಿಯನ್ನು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 185.12**

**ವಿಷಯ: ಶ್ರೀ ಯಶ್ವಂತ್ .ಕೆ S/o ಲೇಟ್ ಶ್ರೀ ಕುಮಾರಸ್ವಾಮಿ. ಎಸ್, ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 15.04.2026.**

- * -

ಶ್ರೀ ಯಶ್ವಂತ್. ಕೆ S/o ಲೇಟ್ ಶ್ರೀ ಕುಮಾರಸ್ವಾಮಿ. ಎಸ್ ಇವರು ದಿನಾಂಕ: 15.04.2026 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ನನ್ನ ತಂದೆಯವರಾದ ಲೇಟ್ ಶ್ರೀ ಕುಮಾರಸ್ವಾಮಿ. ಎಸ್ ರವರು ಕರಾಮುವಿ ಸಿದ್ಧಪಾಠ ವಿಭಾಗದಲ್ಲಿ ಹಿರಿಯ ಸಹಾಯಕ(ಸ್ವಪ್ರ) ರಾಗಿ ಸೇವೆ ಸಲ್ಲಿಸುತ್ತಿದ್ದು ಸರಿಯಷ್ಟೆ, ಅವರು ದಿನಾಂಕ:16.11.2025 ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಆದ ಕಾರಣ ನಾನು ದ್ವಿತೀಯ ಪಿ.ಯು.ಸಿ ವಿದ್ಯಾಭ್ಯಾಸವನ್ನು ಹೊಂದಿದ್ದು ನನ್ನ ವಿದ್ಯಾರ್ಹತೆಗೆ ಅನುಗುಣವಾಗಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಬೇಕಾಗಿ ಮನವಿ ಪತ್ರದಲ್ಲಿ ಕೋರಿರುತ್ತಾರೆ.

ಶ್ರೀಮತಿ ನವೀನಕುಮಾರಿ ಬಿ.ಪಿ W/o ಲೇಟ್. ಶ್ರೀ ಕುಮಾರಸ್ವಾಮಿ. ಎಸ್ ಇವರು ದಿನಾಂಕ: 15.04.2026 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ನನ್ನ ಪತಿಯವರಾದ ಲೇಟ್ ಶ್ರೀ ಕುಮಾರಸ್ವಾಮಿ. ಎಸ್ ರವರು ಕರಾಮುವಿ ಸಿದ್ಧಪಾಠ ವಿಭಾಗದಲ್ಲಿ ಹಿರಿಯ ಸಹಾಯಕ (ಸ್ವಪ್ರ) ರಾಗಿ ಸೇವೆ ಸಲ್ಲಿಸುತ್ತಿದ್ದು ಸರಿಯಷ್ಟೆ, ಅವರು ದಿನಾಂಕ:16.11.2025 ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಆದ ಕಾರಣ ನನ್ನ ಮಗನಾದ ಶ್ರೀ ಯಶ್ವಂತ್ ಕೆ, ದ್ವಿತೀಯ ಪಿ.ಯು.ಸಿ ವಿದ್ಯಾಭ್ಯಾಸವನ್ನು ಹೊಂದಿದ್ದು, ಮೃತರ ಕುಟುಂಬಕ್ಕೆ ನೀಡುವ ಅನುಕಂಪ ಆಧಾರಿತ ಉದ್ಯೋಗವನ್ನು ನನ್ನ ಬದಲಿಗೆ ನನ್ನ ಮಗನಾದ ಶ್ರೀ ಯಶ್ವಂತ್ ಕೆ ಅವರಿಗೆ ನೀಡಬೇಕೆಂದು ಕೋರುತ್ತೇನೆ ಹಾಗೂ ಸದರಿ ವಿಚಾರವಾಗಿ ನನ್ನದು ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸುತ್ತಾ, ನನ್ನ ಮಗನಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗ ನೀಡಬೇಕಾಗಿ ಮನವಿ ಪತ್ರದಲ್ಲಿ ಕೋರಿರುತ್ತಾರೆ.

ಶ್ರೀ ಯಶ್ವಂತ್ S/o ಲೇಟ್ ಶ್ರೀ ಕುಮಾರಸ್ವಾಮಿ. ಎಸ್ ಇವರು ಅನುಕಂಪದ ಆಧಾರದ ಮೇಲೆ ಕೆಲಸವನ್ನು ನೌಕರಿಗೆ ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 18 ವರ್ಷ 05 ತಿಂಗಳು ಪೂರೈಸಿದ್ದು, ವಿದ್ಯಾರ್ಹತೆಯಾಗಿ ಪಿ.ಯು.ಸಿ ಯನ್ನು ಪ್ರಸ್ತುತ ಪೂರ್ಣಗೊಳಿಸಿರುವುದು ಅವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತಿಳಿದು ಬಂದಿರುತ್ತದೆ.

ಈ ಸಂಬಂಧ, (1) ದಿ. ಶ್ರೀ ಕುಮಾರಸ್ವಾಮಿ. ಎಸ್ ರವರ ಮರಣ ಸಮರ್ಥನಾ ಪತ್ರ, (2)ಮೃತರ ವಂಶವೃಕ್ಷದ ದೃಢೀಕರಣ ಪತ್ರ, (3) ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಛಾಯಾ ಪ್ರತಿ, (4) ವರ್ಗಾವಣೆ ಪ್ರಮಾಣ ಪತ್ರ, (5) ಪಿ.ಯು.ಸಿ ಅಂತರ್ಜಾಲದ ಪ್ರತಿ, (6) ಜಾತಿ ಮತ್ತು ಆದಾಯ ದೃಢೀಕರಣ ಪತ್ರದ ಪ್ರತಿ, (7) ರೇಷನ್ ಕಾರ್ಡ್ ನ ಛಾಯಾ ಪ್ರತಿ, (8) ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ, (9) ಪಾನ್ ಕಾರ್ಡ್ ನ ಛಾಯಾ ಪ್ರತಿ, (10) ಆಧಾರ್ ಕಾರ್ಡ್ ಗಳನ್ನು ಅರ್ಜಿಯೊಂದಿಗೆ ಸಲ್ಲಿಸಿರುತ್ತಾರೆ. ಪಿಯುಸಿ ಅಂಕಪಟ್ಟಿಯ ಮೂಲ ಪ್ರತಿ ಮತ್ತು ಚುನಾವಣಾ ಗುರುತಿನ ಚೀಟಿ ಪ್ರತಿಯನ್ನು ಸಲ್ಲಿಸಿರುವುದಿಲ್ಲ.

**ಕುಲಪತಿಗಳು** **ಕುಲಸಚಿವರು**

ಶ್ರೀ ಲೇಟ್ ಶ್ರೀ ಕುಮಾರಸ್ವಾಮಿ. ಎಸ್ ಇವರು ದಿನಾಂಕ:16.11.2025 ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಮರಣದ ಸಂದರ್ಭದಲ್ಲಿ ಹಿರಿಯ ಸಹಾಯಕ(ಸ್ವಪ್ರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸದರಿಯವರು ತಮ್ಮ ಸೇವಾ ವಹಿಯಲ್ಲಿ ನೀಡಿರುವ ಅವಲಂಬಿತರ ಮಾಹಿತಿಯಲ್ಲಿ ಪತ್ನಿ ಶ್ರೀಮತಿ ನವೀನಕುಮಾರಿ ಬಿ.ಪಿ, ಮಗ ಯಶ್ವಂತ್ ಕೆ, ಮಗಳು ತನ್ಮಯಿ. ಕೆ ಇವರ ಮಾಹಿತಿಯನ್ನು ನೀಡಿರುತ್ತಾರೆ. ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ಕರಾಮುವಿ ನಿಲಯವು ಪರಿನಿಯಮಾವಳಿಯನ್ನು ರಚಿಸಿಕೊಂಡಿರುತ್ತದೆ.

ಕರ್ನಾಟಕ ನಾಗರೀಕ ಸೇವೆಗಳು (Appointment on Compassionate Grounds) ನಿಯಮ 1996 ರಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು ಹಾಗೂ ತತ್ಸಂಬಂಧ ಶ್ರೀ ಕುಮಾರಸ್ವಾಮಿ. ಎಸ್ ಇವರ ಪತ್ನಿಯು ಮಗನಿಗೆ ಉದ್ಯೋಗ ನೀಡಲು ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಇವರ ಮಗ ಯಶ್ವಂತ್ ಕೆ ಇವರಿಗೆ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಕೆ.ಸಿ.ಎಸ್. ನಿಯಮದಲ್ಲಿ ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು | ತತ್ಸಂಬಂಧ ಮಾಹಿತಿ |
|---|---|---|
| | **Eligibility for appointment:**<br>1. Appointment on compassionate ground under these rules shall not be claimed as a matter of right and shall not be given as a matter of course.<br>2. Appointment under these rules shall be restricted to the dependent of a deceased Government servant in the following order of preference namely-<br>[(i) in the case of the deceased female Government servant<br>(a) a son;<br>3. An adopted son or daughter a deceased Government servant shall not be eligible for appointment under these rules [2][(4) A person against whom at the time of making application a criminal case is under investigation or trial, on the charge of having committed murder of the deceased Government servant or for abetting the commission of such offence shall not be eligible for appointment under these rules.]<br>4.Conditions of appointment – Appointment on compassionate grounds under these rules shall vi subject to the following conditions namely<br>(1) The family of the deceased Government servant should be in a financial crisis or destitution. | 1. --------<br>2.(a) ಶ್ರೀ ಯಶ್ವಂತ್. ಕೆ ಇವರು ಲೇಟ್ ಶ್ರೀ ಕುಮಾರಸ್ವಾಮಿ. ಎಸ್ ಇವರ ಮಗನಾಗಿರುತ್ತಾರೆ.<br>3. ಅನ್ವಯಿಸುವುದಿಲ್ಲ.<br>4. ಶ್ರೀ ಯಶ್ವಂತ್. ಕೆ ಇವರು ಸಲ್ಲಿಸಿರುವ ಕುಟುಂಬದ ಆದಾಯ ದೃಢೀಕರಣ ಪತ್ರದಲ್ಲಿ ವಾರ್ಷಿಕ ರೂ. 3,70,560/- ಹಾಗೂ ಇವರು ವಿಶ್ವಕರ್ಮ ಜಾತಿಗೆ ಸೇರಿರುತ್ತಾರೆಂದು ದಾಖಲಿಸಲಾಗಿರುತ್ತದೆ. (ತಹಶೀಲ್ದಾರರು, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ನೀಡಿರುವ ದೃಢೀಕರಣ ಪತ್ರ ಸಂಖ್ಯೆ: RD 1218882133495, ದಿನಾಂಕ:23.10.2024. ಶ್ರೀ ಯಶ್ವಂತ್. ಕೆ ಇವರು ಸಲ್ಲಿಸಿರುವ ದಾಖಲೆಗಳನ್ನು |

ಕುಲಪತಿಗಳು                ಕುಲಸಚಿವರು

<table>
<tr>
<td></td>
<td>(2) Person seeking appointment shall be within the age limit specified for the post in the relevant rules of recruitment specially made in respect of any service or post read with sub-rule (3) of Rule ^ of the Karnataka Civil Serves ( General Recruitment) Rules, 1977 and where it is not so specified such person shall be within the age limits specified in the Karnataka Civil Services ( General Recruitment) Rules, 1977<br><br>(3) Person seeking appointment should possess the minimum qualification specified for the post in the relevant rules of recruitment specially made in respect of any service or post;<br><br>(4) Appointment shall be confide to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Secretariat as may be revised from time to time and any other post in either of the groups as may be specified by the Government from time to time<br><br>(5) Appointment shall be made only against a direct recruitment vacancy.<br><br>(6) Appointment shall be made in the department in which the deceased Government servant was working.</td>
<td>ಪರಿಶೀಲಿಸಲಾಗಿ ಸದರಿಯವರ ಜನ್ಮ ದಿನಾಂಕ: 13.11.2007(ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ), ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 18 ವರ್ಷ 05 ತಿಂಗಳು ಪೂರೈಸಿರುತ್ತಾರೆ. ಕ್ರಮ ಸಂಖ್ಯೆ: 03 ಮತ್ತು 04 ರ ಷರತ್ತುಗಳಿಗೆ ಸಂಬಂಧಿಸಿದಂತೆ ಶ್ರೀ ಯಶ್ವಂತ್. ಕೆ ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ,<br><br>ಸದರಿಯವರು ಶೈಕ್ಷಣಿಕ ಪಿ.ಯು.ಸಿ ವಿದ್ಯಾರ್ಹತೆ ತೇರ್ಗಡೆ ಹೊಂದಿರುತ್ತಾರೆ. ಪಿ.ಯು.ಸಿ ಅಂತರ್ಜಾಲದ ಪ್ರತಿ ಸಲ್ಲಿಸಿರುತ್ತಾರೆ.<br><br>ಕರಾಮುವಿ ನಿಲಯವು ರಚಿಸಿಕೊಂಡಿರುವ ಅ&ಖ ನಿಯಮದ ಪ್ರಕಾರ ಶ್ರೀ ಯಶ್ವಂತ್. ಕೆ ಇವರ ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಿ, ಕರಾಮುವಿ ನಿಲಯದಲ್ಲಿ ನೇರ ನೇಮಕಾತಿಯಡಿಯಲ್ಲಿ ಗ್ರೂಪ್ "ಸಿ" ವರ್ಗದ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:<br><br>
<table>
<tr><th>ವಿವರ</th><th>ದ್ವಿದಗು</th></tr>
<tr><td>ಸೃಜನೆಯಾದ ಹುದ್ದೆಗಳು</td><td>138</td></tr>
<tr><td>371 ಜೆ ರಡಿ ಮೀಸಲಾದ ಹುದ್ದೆಗಳು</td><td>11</td></tr>
<tr><td>371 ಜೆ ರಡಿ ಮೀಸಲಾದ ಹುದ್ದೆಗಳನ್ನುಹೊರತುಪಡಿಸಿ ಉಳಿಯುವ ಹುದ್ದೆಗಳು</td><td>127</td></tr>
<tr><td>ಹಾಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು</td><td>87</td></tr>
<tr><td>ಖಾಲಿ ಇರುವ ಹುದ್ದೆಗಳು</td><td>51</td></tr>
</table>
</td>
</tr>
</table>

ದ್ವಿತೀಯ ದರ್ಜೆ ಗುಮಾಸ್ತ ಒಟ್ಟು 138 ಹುದ್ದೆಗಳು ಸೃಜನೆಯಾಗಿದ್ದು 371(ಜೆ)ಗೆ ಒಟ್ಟು 11 ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ. ಉಳಿಕೆ 127 ದ್ವಿತೀಯ ದರ್ಜೆ ಗುಮಾಸ್ತ ಹುದ್ದಗಳನ್ನು 75:25ರ ಅನುಪಾತದಲ್ಲಿ ನೇರ ನೇಮಕಾತಿಗೆ 95 ಹಾಗೂ ಪದೋನ್ನತಿಗೆ 32 ಹುದ್ದೆಗಳನ್ನು ಮೀಸಲಿರಿಸಿದ್ದು, 32 ಪದೋನ್ನತಿ ಹುದ್ದೆಗಳಲ್ಲಿ32 ಪದೋನ್ನತಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದ್ದು, ಹಾಗೂ 95 ನೇರ ನೇಮಕಾತಿ ಹುದ್ದೆಗಳಲ್ಲಿ 50 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಹಾಗೂ ಅನುಕಂಪದ ಆಧಾರದ ಮೇಲೆ 05 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ 40 ನೇರ ನೇಮಕಾತಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯದಲ್ಲಿ 2007ರ ನೇರ ನೇಮಕಾತಿಯಲ್ಲಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ನೇಮಕಗೊಂಡು ಹಿರಿಯ ಸಹಾಯಕ(ಸ್ವಪ್ರ) ಕಾರ್ಯ ನಿರ್ವಹಿಸುತ್ತಿದ್ದ ದಿವಂಗತ ಶ್ರೀ ಕುಮಾರಸ್ವಾಮಿ.ಎಸ್, ಇವರ ಮಗನಾದ ಶ್ರೀ ಯಶ್ವಂತ್ ಕೆ, ಇವರು ಇವರು ತಮ್ಮ ತಂದೆಯವರ ಮರಣದ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಕುಲಪತಿಗಳು

ಕುಲಸಚಿವರು

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ ಕುಮಾರಸ್ವಾಮಿ. ಎಸ್ ರವರು ಕರಾಮುವಿ ಸಿದ್ಧಪಾಠ ವಿಭಾಗದಲ್ಲಿ ಹಿರಿಯ ಸಹಾಯಕ (ಸ್ವಪ್ರ) ರಾಗಿ ಸೇವೆ ಸಲ್ಲಿಸುತ್ತಿದ್ದು, ಅವರು ದಿನಾಂಕ:16.11.2025ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಇವರ ಮಗನಾದ ಶ್ರೀ ಯಶ್ವಂತ್. ಕೆ ರವರು ದಿನಾಂಕ: 15.04.2026 ರಂದು ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಗೆ ಅನಗುಣವಾಗಿ ನೇಮಕಾತಿ ಕೋರಿ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿದ್ದು, ಸದರಿ ಮನವಿಯ ಅನ್ವಯ ಕರಾಮುವಿ ಪರಿನಿಯಮಗಳ ಅನ್ವಯ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಗೆ ಅನಗುಣವಾಗಿ ನೇಮಕಾತಿ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ವಿಷಯ ಸಂಖ್ಯೆ: 185.13**

ವಿಷಯ: ಶ್ರೀ. ಮಹದೇವ ಕೆ, ಪ್ರದಗು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು ಇವರ ಪತ್ನಿಯವರಾದ ಶ್ರೀಮತಿ. ಕೆ ಪಿ ಪೂರ್ಣಿಮಾ ಇವರು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಸಂಬಂಧ ಮರುಭರಿಸಿರುವ ವೈದ್ಯಕೀಯ ವೆಚ್ಚಕ್ಕೆ ಅನುಸಮರ್ಥನೆ ಪಡೆಯುವ ಬಗೆಗೆ.

– * –

ಶ್ರೀ. ಮಹದೇವ ಕೆ, ಪ್ರದಗು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು ಇವರ ಪತ್ನಿಯವರಾದ ಶ್ರೀಮತಿ. ಕೆ ಪಿ ಪೂರ್ಣಿಮಾ, ಇವರು ದಿನಾಂಕ: 25/08/2025 ರಂದು ಹೃದಯ ಸಂಬಂಧ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ಪಡೆಯಲು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮೈಸೂರಿನಲ್ಲಿ ಒಳ ರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತಾರೆ. ಈ ಸಂಬಂಧ ಆಸ್ಪತ್ರೆಯವರು ಒಳ ರೋಗಿಯಾಗಿ ಚಿಕಿತ್ಸೆ ನೀಡಿರುವ ಹುಂಡಿಯ ಮೊತ್ತ ರೂ. 93,113/–(ತೊಂಬತ್ತ ಮೂರು ಸಾವಿರದ ಒಂದು ನೂರ ಹದಿಮೂರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಗಾಗಿ ಅಗತ್ಯ ದಾಖಲೆಗಳೊಂದಿಗೆ ಹುಂಡಿಯನ್ನು ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಅವರ ಅವಲಂಬಿತ ಕುಟುಂಬದವರಿಗೆ KMAR ನಿಯಮ 1963 ಮತ್ತು ಅಉಊಖ ಬೆಂಗಳೂರು–2014ರ ದರಗಳನ್ವಯ ನಗದು ರಹಿತ ವೈದ್ಯಕೀಯ ಸೌಲಭ್ಯ ನೀಡುವ ಸಂಬಂಧ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರ ಜೊತೆ ಪರಸ್ಪರ ಒಪ್ಪಿಗೆಯ ಮೇರೆಗೆ 03 (ಮೂರು) ವರ್ಷಗಳ (ದಿನಾಂಕ:11/11/2024 ರಿಂದ 10–11–2027ರವರೆಗೆ) ಅವಧಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ. ಒಂದು ಹಣಕಾಸಿನ ವರ್ಷದಲ್ಲಿ (Financial Year) ಒಬ್ಬ ನೌಕರನಿಗೆ 01 (ಒಂದು) ಲಕ್ಷ ಮೀರಿದ ಸಂದರ್ಭದಲ್ಲಿ ಹುಂಡಿಯ ಮೊತ್ತವನ್ನು ಪಾವತಿಸಿದ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಅನುಸಮರ್ಥನೆ ಪಡೆಯುವ ಸಂಬಂಧ ದಿನಾಂಕ: 09/12/2024ರಂದು ಸ್ಥಾಯಿ ಆದೇಶವನ್ನು ಹೊರಡಿಸಲಾಗಿದ್ದು ಸದರಿ ಸ್ಥಾಯಿ ಆದೇಶದನ್ವಯ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಇವರಿಗೆ ರೂ. 93,113/–ಗಳನ್ನು ಪಾವತಿಸಲಾಗಿರುತ್ತದೆ.

ಮುಂದುವರೆದು, ಸದರಿಯವರಿಗೆ ಪ್ರಸಕ್ತ 2025–26ನೇ ಆರ್ಥಿಕ ಸಾಲಿನಲ್ಲಿ ದಿನಾಂಕ: 11/08/2025 ರಂದು ಮೊತ್ತ ರೂ. 9,812/– ಗಳನ್ನು ಪಾವತಿಸಲಾಗಿದ್ದು, ಪ್ರಸ್ತುತ ಪಾವತಿಸಲಾಗಿರುವ ಹುಂಡಿಯ ಮೊತ್ತ ರೂ. 93,113/–ಗಳು ಸೇರಿದಂತೆ ವೈದ್ಯಕೀಯ ವೆಚ್ಚದ ಮರುಭರಿಕೆಯ ಒಟ್ಟಾರೆ ಮೊತ್ತ ರೂ. 1,02,925/–ಗಳಾಗುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಇವರು ಶ್ರೀ. ಮಹದೇವ ಕೆ, ಪ್ರದಗು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು ಇವರ ಪತ್ನಿಯವರಾದ ಶ್ರೀಮತಿ. ಕೆ.ಪಿ ಪೂರ್ಣಿಮಾ, ಇವರಿಗೆ ಹೃದಯ ಸಂಬಂಧ ಒಳ ರೋಗಿಯಾಗಿ ಚಿಕಿತ್ಸೆ ನೀಡಿರುವ ಸಲುವಾಗಿ ಪಾವತಿಸಲಾಗಿರುವ ಮೊತ್ತ ರೂ. 93,113/–(ತೊಂಬತ್ತ ಮೂರು ಸಾವಿರದ ಒಂದು ನೂರ ಹದಿಮೂರು ರೂಪಾಯಿಗಳು ಮಾತ್ರ) ಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಿದೆ.

*****

ಕುಲಪತಿಗಳು ಕುಲಸಚಿವರು

ಈ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಖಾಯಂ ನೌಕರರುಗಳ ವೈದ್ಯಕೀಯ ವೆಚ್ಚವು/ಮರುಭರಿಕೆ ವೆಚ್ಚವು ಒಂದು ಹಣಕಾಸಿನ ವರ್ಷದಲ್ಲಿ ರೂ. 1 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವೆಚ್ಚವಾಗಿದ್ದರೆ ಅಂತಹ ಪ್ರಕರಣಗಳನ್ನು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ಮಹದೇವ ಕೆ, ಪ್ರದಗು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು ಇವರ ಪತ್ನಿಯವರಾದ ಶ್ರೀಮತಿ. ಕೆ ಪಿ ಪೂರ್ಣಿಮಾ ಇವರು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುವ ಸಲುವಾಗಿ ಪಾವತಿಸಲಾಗಿರುವ ಮರುಭರಿಕೆಯ ಒಟ್ಟಾರೆ ಮೊತ್ತ ರೂ.1,02,925/- (ಒಂದು ಲಕ್ಷದ ಎರಡು ಸಾವಿರದ ಒಂಬೈನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ) ಗಳಿಗೆ ಸಭೆಯು ಅನುಸಮರ್ಥನೆ ನೀಡಿತು.**

#####

**ವಿಷಯ ಸಂಖ್ಯೆ: 185.14**

**ವಿಷಯ: ವಿಶ್ವವಿದ್ಯಾನಿಲಯದ ಕವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ 04 LED Display Board ಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಹಾಗೂ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲು ವಿಶ್ವವಿದ್ಯಾನಿಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ 04 LED Display Board ಗಳನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಲು ದಿನಾಂಕ: 02.04.2026ರಂದು ಮಾನ್ಯ ಕುಲಪತಿಗಳು ಟಿಪ್ಪಣಿ ನೀಡಿದ ಹಿನ್ನೆಲೆಯಲ್ಲಿ, 04 LED Display Board ಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಅವಶ್ಯವಿರುವ ಪರಿಕರಣಗಳನ್ನು ಈ ಕೆಳಕಂಡ ಪ್ರಮಾಣದಲ್ಲಿ ಅಂತಿಮಗೊಳಿಸಲಾಗಿ, ಸದರಿ ಪರಿಕರಣಗಳ ಅಂದಾಜು ಮೊತ್ತ ಈ ಕೆಳಕಂಡಂತ್ತಿರುತ್ತದೆ.

| Sl No | Description | Quantity | Amount (Rs) (including GST) |
|---|---|---|---|
| 1 | LED Indoor Video Wall<br>• Indoor Video Screen of size 12*12, Video Processor, 2.6 Pixel with HDMI cable, LAN and Power cable and Installation | 02 | 68,00,702.00 |
| 2 | LED Indoor Video Wall<br>• Indoor Video Screen of size 12*6.5, Video Processor, 2.6 Pixel with HDMI cable, LAN and Power cable and Installation | 02 | 57,46,920.00 |
| 3 | Online UPS<br>• 5KVA, 400V+Neutral and Earth 350V AC-460V AC, Frequency: 47 to 53Hz<br>• Battery Rating: 240V DC, 3 Battery Unit, 12V 100AH upto 200AH, Low Battery per Alarm.<br>• UPS batteries with Stand and Installation | 04 | 21,05,048.00 |

ಕುಲಪತಿಗಳು

ಕುಲಸಚಿವರು

| | | | |
|---|---|---|---|
| 4 | Display TV<br>• 43" with HDMI cable laying and Installation | 04 | 4,66,148.00 |

ಮೇಲ್ಕಂಡ ಪರಿಕರಣಗಳನ್ನು ಖರೀದಿಸಿ ವಿವಿಯ ಸಭಾಂಗಣಗಳಲ್ಲಿ ಅಳವಡಿಸಲು ಒಟ್ಟು ಮೊತ್ತ ರೂ. 1,51,18,818.00 (ಒಂದು ಕೋಟಿ ಐವತ್ತೊಂದು ಲಕ್ಷದ ಹದಿನೆಂಟು ಸಾವಿರದ ಎಂಟು ನೂರ ಹದಿನೆಂಟು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳೆಂದು ಅಂದಾಜಿಸಿದ್ದು, ಸದರಿ ಪರಿಕರಣಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

ವಿಶ್ವವಿದ್ಯಾನಿಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ 04 LED Display Board ಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ವಿಷಯವನ್ನು ಪೂರ್ಣ ವಿವರಗಳೊಂದಿಗೆ ಮಂಡಿಸಬೇಕೆಂದು ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಸಭೆಗೆ ತಿಳಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಮಾತಿಗೆ ಡಾ. ಮಹೇಶ್ .ಎಸ್ ರವರು ಸಹ ಧ್ವನಿಗೂಡಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ 04 LED Display Board ಗಳನ್ನು ಖರೀದಿಸಿ ಅಳವಡಿಸುವ ಸಂಬಂಧದ ಸಭೆಯು ಅನುಮೋದಿಸಿತು.**

#####

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:</u>**

1) **As per the sub-cluse (2) of clause (1) of the First Statutes set out in the second schedule of the KSOU Act, 1992 you are requested to submit nomination of one (01) person as per the provision of sub-clause (3) of cluse (1) of the First Statutes set out in the second schedule of the KSOU Act, 1992.**

– * –

ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಕುಲಪತಿಗಳು ಮಾತನಾಡಿ ಕರಾಮುವಿ ಕುಲಪತಿಗಳ ನೇಮಕ ಸಂಬಂಧ **sub-clause (3) of cluse (1) of the First Statutes set out in the second schedule of the KSOU Act, 1992** ಪ್ರಕಾರ ಒಬ್ಬರು ಹೆಸರಾಂತ ವಿಶ್ರಾಂತ ಕುಲಪತಿಗಳ ಹೆಸರನ್ನು ಸೂಚಿಸಲು ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಸಚಿವಾಲಯದಿಂದ ಪತ್ರ ಬಂದಿರುತ್ತದೆಂದು ಸಭೆಯ ಗಮನಕ್ಕೆ ತಂದರು.

ಡಾ. ಮಹೇಶ್ .ಎಸ್ ರವರು ಮಾತನಾಡಿ ಡಾ. ಕರಿಸಿದ್ದಪ್ಪ, ವಿಶ್ರಾಂತ ಕುಲಪತಿಗಳು, ವಿಶ್ವೇಶರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಇವರನ್ನು ಸದಸ್ಯರನ್ನಾಗಿ ಮಾಡಲು ತಿಳಿಸಿದರು.

ಇತರೆ ಸದಸ್ಯರುಗಳು ಸೂಕ್ತವಾದ ವಿಶ್ರಾಂತ ಕುಲಪತಿಗಳ ಹೆಸರನ್ನು ಸೂಚಿಸಬಹುದೆಂದು ಕುಲಪತಿಗಳು ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಕುಲಪತಿಗಳ ನೇಮಕ ಸಂಬಂಧ **sub-clause (3) of cluse (1) of the First Statutes set out in the second schedule of the KSOU Act, 1992** ಪ್ರಕಾರ ಒಬ್ಬರು ಹೆಸರಾಂತ ವಿಶ್ರಾಂತ ಕುಲಪತಿಗಳಾದ ಡಾ. ಕರಿಸಿದ್ದಪ್ಪ ರವರನ್ನು ಸದಸ್ಯರನ್ನಾಗಿ ನೇಮಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

#####

**2)** ಶ್ರೀಮತಿ. ಮಾಲತಿ .ಟಿ ರವರು ಮಾತನಾಡಿ ಕರಾಮುವಿಯಲ್ಲಿ ಹೊಸದಾಗಿ ನೇಮಕವಾದ ನೌಕರರುಗಳಿಗೆ ಪರೀಕ್ಷಾರ್ಥಿ ಸೇವಾ ಅವಧಿಯನ್ನು 5 ವರ್ಷದಿಂದ 2 ವರ್ಷಕ್ಕೆ ಸೀಮಿತಗೊಳಿಸುವ ಬಗ್ಗೆ.

– * –

ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ 2019ರ ಡಿಪಿಎಆರ್ ನಿಯಮಾವಳಿಗಳ ಪ್ರಕಾರ ನಮ್ಮ ವಿಶ್ವವಿದ್ಯಾನಿಲಯದಲ್ಲಿ 2022ರಲ್ಲಿ ಸ್ಥಾಯಿ ಆದೇಶವನ್ನು ಹೊರಡಿಸಿದ್ದು, ಸದರಿ ವಿಷಯವನ್ನು ವ್ಯವಸ್ಥಾಪನ ಮಂಡಳಿಯ 179.11ರ ಸಭೆಯಲ್ಲಿ ವಿಷಯ ಮಂಡಿಸಿದ್ದು, ಸದರಿ ವಿಷಯದ ಬಗ್ಗೆ ಚರ್ಚೆಯಾಗಿ, ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ನೇಮಕವಾದ ನೌಕರರುಗಳ ಪರೀಕ್ಷಾರ್ಥಿ ಸೇವಾ ಅವಧಿಯನ್ನು ಡಿಪಿಎಆರ್ ನಿಯಮಾವಳಿಗಳ ಪ್ರಕಾರ 2 ವರ್ಷದಿಂದ 5 ವರ್ಷ ಮಾಡಿರುವ ಬಗ್ಗೆ ವಿಶ್ವವಿದ್ಯಾನಿಲಯದಿಂದ ಹೊರಡಿಸಿರುವ ಸ್ಥಾಯಿ ಆದೇಶಕ್ಕೆ ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು, ಸದರಿ ವಿಷಯದ ಬಗ್ಗೆ ಈ ಬಗ್ಗೆ ಬದಲಾವಣೆಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಡಿಪಿಎಆರ್‌ಗೆ ಪತ್ರ ಬರೆದು ಈ ಬಗ್ಗೆ ಮಾಹಿತಿ ಪಡೆದು ಮುಂದಿನ ಕ್ರಮವಹಿಸಲಾಗುವುದೆಂದು ತಿಳಿಸಿದರು.

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯಲ್ಲಿ ಹೊಸದಾಗಿ ನೇಮಕಗೊಳ್ಳುವ ನೌಕರರುಗಳ ಪರೀಕ್ಷಾರ್ಥಿ ಸೇವಾ ಅವಧಿಯ ಬಗ್ಗೆ ಕರ್ನಾಟಕ ಸರ್ಕಾರದ ಡಿಪಿಎಆರ್ ನಿಯಮಾವಳಿಗಳನ್ನು ಪಡೆದು ಅವುಗಳ ಪ್ರಕಾರ ಮುಂದಿನ ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**3)** ಶ್ರೀ. ಹರೀಶ್ ಗೌಡ .ಕೆ ರವರು ಮಾತನಾಡಿ ಕರಾಮುವಿಯಲ್ಲಿ 10 ವರ್ಷದಿಂದ ಸೇವೆ ಸಲ್ಲಿಸಿರುವ 19 ನೌಕರರುಗಳಿಗೆ ಯಾವ ಕಾರಣಕ್ಕೆ ಹೆಚ್.ಆರ್.ಎ ನೀಡಿರುವುದಿಲ್ಲವೆಂದು ಕೇಳಿದರು.

– * –

ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಕುಲಸಚಿವರು ಮಾತನಾಡಿ ಈ ಬಗ್ಗೆ ಯಾರ‍್ಯಾರು ತಾತ್ಕಾಲಿಕ ಸೇವೆಯಲ್ಲಿ 10 ವರ್ಷ ಪೂರ್ಣಗೊಂಡಿರುತ್ತಾರೋ ಅವರುಗಳಿಗೆ ಈಗಾಗಲೇ ಹೆಚ್.ಆರ್.ಎ ಸೌಲಭ್ಯಗಳನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ತೀರ್ಮಾನ:

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಇತ್ತೀಚೆಗೆ ದಿನಗಳಲ್ಲಿ 10 ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿರುವ ನೌಕರರ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮವಹಿಸಲು ತೀರ್ಮಾನಿಸಿತು.

#####

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 185ನೇ ಸಾಮಾನ್ಯ ಸಭೆಗೆ ಮಾನ್ಯ ಸದಸ್ಯರುಗಳು ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರುಗಳಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಪತಿಗಳು

ಕುಲಸಚಿವರು